Officers Adda

# ಪ್ರಚಲಿತ ವಿದ್ಯಮಾನಗಳು

# Aug 11 to 14 2023

By BHARAT C N
BE (MECH)

- ✓ ಎಲೆಕ್ಷನ್ ಕಮಿಷನರ್ ಆಯ್ಕೆ ಸಂಸತ್ತು v/s ಸುಪ್ರೀಂ ಕೋರ್ಟ್
- ✓ RBI ನ MPC ಸಭೆ CRR,SLR...ICRR..?
- ✓ ಕೇರಳ "ಕೇರಳಂ" ಆಗಲು ಸಾಧ್ಯನಾ?
- ✓ ಅತಿಥಿ ಪೋರ್ಟಲ್
- ✓ ಕ್ವಿಟ್ ಇಂಡಿಯಾ ಚಳುವಳಿ ದಿನ 2023
- ✓ ವಿಶ್ವ ಬುಡಕಟ್ಟು ದಿನ 2023
- ✓ CBI ಅಕಾಡೆಮಿ &ಇಂಟರ್‌ಪೋಲ್ ಅಕಾಡೆಮಿ
- ✓ ಆನೆಗಳಗಣತಿ ಕರ್ನಾಟಕವೇ ಪ್ರಥಮ
- ✓ ಸ್ಥಾಯಿ ಸಮಿತಿಗಳು
- ✓ INPC
- ✓ MICRO ISSUE
- ✓ ONE LINER
- ✓ GOLDEN THOUGHT


ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ
BACKUP PLAN
ಬೇಕೇ ಬೇಕು ಯಾಕೆ ಗೊತ್ತಾ.?
BY: BHARAT C N

ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗುವ ಪ್ರಚಲಿತ ವಿದ್ಯಮಾನಗಳು
ಕನ್ನಡ ಮಾಧ್ಯಮದಲ್ಲಿ



Subscribe to

# OFFICERS ADDA

## You Tube & Telegram Channel

**By BHARAT C N**

# ಪ್ರತಿದಿನದ ಪ್ರಚಲಿತ ವಿದ್ಯಮಾನಗಳ ವಿಶ್ಲೇಷಣೆ




For

# KAS/IAS/IPS/PSI/FDA/SDA/PC/BANKING

Exams

**Officers Adda YouTube channel By BHARAT sir**

Officers Adda
61.1K subscribers

Kannada Medium Current Affairs for all competitive exams (PC to DC) by BHARAT sir
For more updates subscribe to
OFFICERS ADDA telegram and You tube channel

Officers Adda Telegram channel :

https://t.me/officersadda

Course  Details :

https://drive.google.com/file/d/1GuP8...

app link  :

https://play.google.com/store/apps/de...

follow us on insta  :

https://www.instagram.com/officersadd...

Telegram channel for essay and answers writing :

https://t.me/Art_Of_Answer_Writing1

June Current Affairs :

https://drive.google.com/file/d/1JROE...

oct current affairs :

https://drive.google.com/file/d/1KePH...

december current affairs:




IndianMoney's Finan...
Ad 4.2 ★ FREE
INSTALL

#Daily#Kannadamedium
#Top10MCQ #BharatSir  #short

2.3K views · Streamed 23 hours ago

226 | 3 | Live chat | Share | Dow

Officers Adda
61.1K subscribers
SUBSCRIBED

ಗ್ರಾಮೀಣ ಪ್ರದೇಶದ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ

# OFFICERS ADDA ದ ಉಚಿತ ಸೇವೆಗಳು

- ಪ್ರತಿದಿನದ ಪ್ರಚಲಿತ ವಿದ್ಯಮಾನಗಳು
- (YouTube ನಲ್ಲಿ)
- ಪ್ರಚಲಿತ ವಿದ್ಯಮಾನಗಳ ಪಿಡಿಎಫ್
- ಮಾಸಿಕ ಪ್ರಚಲಿತ ವಿದ್ಯಮಾನಗಳು ಕೈಪಿಡಿ (officers adda telegram)
- ಒಂದು ವರ್ಷದ ಪ್ರಚಲಿತ ವಿದ್ಯಮಾನಗಳ ಕೈಪಿಡಿ (officers adda telegram)
- Art of Answer writing ಇಲ್ಲಿ ಪ್ರತಿದಿನ ಪ್ರಬಂಧಗಳು, ಕೆಎಎಸ್ ಮುಖ್ಯ ಪರೀಕ್ಷೆಯ ಪ್ರಶ್ನೆಗಳು ಮತ್ತು ಪಿಎಸ್ಐ ಸಂಬಂಧಿತ ಭಾಷಾಂತರ ಕೊಡಲಾಗುತ್ತದೆ.
- ವಿದ್ಯಾರ್ಥಿಗಳೊಂದಿಗೆ ಗೂಗಲ್ ಮೀಟ್ ಮುಖಾಂತರ ಸಲಹೆ ಮತ್ತು ಸೂಚನೆ. (8217546761)
- Daily Practice MCQ's in Telegram and YouTube
- Strategy classes for all type competitive exams
- ಸಂಪನ್ಮೂಲ ವ್ಯಕ್ತಿಗಳ ಜೊತೆಗೆ ಯೂಟ್ಯೂಬ್ ನಲ್ಲಿ ಚರ್ಚೆ
- ಸಾಧಕರ ಜೊತೆ ಸಂದರ್ಶನಗಳು.
- ಇನ್ನು ಹಲವಾರು


9:21
74%
Officers Adda V2
Officers Adda
Uninstall
Open
What's new
Last updated Sep 12, 2022
Bugs Fixing
About this app
Officers Adda is a hub for current affairs and Competitive exams preparation.
Education
4.7 ★
27 reviews
9.2 MB
12+
Rated for 12
OFFICERS ADDA
APP
Officers Adda

Let's start with

full Josh and full Enthusiasm



- BIG ISSUES
- MINI ISSUES
- MICRO ISSUES
- ONE LINER

Officers Adda

- **BIG ISSUES**

Officers Adda

# NATIONAL ISSUES



# ಪ್ರಧಾನಿ ನೇತೃತ್ವದ ಮೂವರು ಸದಸ್ಯರ ಸಮಿತಿ




Officers Adda

# ಪ್ರಧಾನಿ ನೇತೃತ್ವದ ಮೂವರು ಸದಸ್ಯರ ಸಮಿತಿ

Officers Adda

- ಮೂಲ ಸಂವಿಧಾನದಲ್ಲಿ ಚುನಾವಣಾ ಆಯುಕ್ತರು ಮತ್ತು ಮುಖ್ಯ ಚುನಾವಣಾ ಆಯುಕ್ತರನ್ನು ನೇಮಕ ಮಾಡುವ ಕುರಿತು ಯಾವುದೇ ವಿಧಾನವನ್ನು ಪ್ರಸ್ತಾಪಿಸಿರಲಿಲ್ಲ.

- ಕೇಂದ್ರ ಮಂತ್ರಿಮಂಡಲ ಮತ್ತು ಪ್ರಧಾನ ಮಂತ್ರಿಗಳ ಸಲಹೆ ಮೇರೆಗೆ ಭಾರತದ ರಾಷ್ಟ್ರಪತಿಗಳು ಚುನಾವಣಾ ಆಯುಕ್ತರು ಮತ್ತು ಮುಖ್ಯ ಚುನಾವಣಾ ಆಯುಕ್ತರನ್ನು ನೇಮಕ ಮಾಡುತ್ತಿದ್ದರು

- ನಂತರದ ದಿನಗಳಲ್ಲಿ ಈ ವಿಧಾನವನ್ನು ಸುಪ್ರೀಂ ಕೋರ್ಟ್ ನಲ್ಲಿ ಪ್ರಶ್ನೆಸಲಾಯಿತು

- ಸುಪ್ರೀಂ ಕೋರ್ಟ್ ನಲ್ಲಿ ಇಬ್ಬರು ನ್ಯಾಯಮೂರ್ತಿಗಳ ಪೀಠವು ಇದನ್ನು ಕೈಗೆತ್ತಿಕೊಂಡಿತು ಮತ್ತು ಇದರಲ್ಲಿ ಸಾಕಷ್ಟು ಸಂವಿಧಾನಾತ್ಮಕ ಅಂಶ ಇರುವುದರಿಂದ ಇದನ್ನು ಇನ್ನೂ ದೊಡ್ಡದಾದ ಪೀಠಕ್ಕೆ ವರ್ಗಾವಣೆ ಮಾಡಿತು

Officers Adda

- ನಂತರ ಸುಪ್ರೀಂ ಕೋರ್ಟ್ ಹೀಗೆ ಹೇಳಿತು

- ಸಂಸತ್ತು ಒಂದು ಕಾಯ್ದೆಯನ್ನು ಮಾಡುವವರೆಗೆ ಚುನಾವಣಾ ಆಯುಕ್ತರು ಮತ್ತು ಮುಖ್ಯ ಚುನಾವಣಾ ಆಯುಕ್ತರನ್ನು ಪ್ರಧಾನಮಂತ್ರಿಯವರ ಅಧ್ಯಕ್ಷತೆಯ ಸಮಿತಿ ನೇಮಕ ಮಾಡುತ್ತದೆ

- ಈ ಸಮಿತಿಯಲ್ಲಿ ಮೂರು ಜನರಿದ್ದು ಪ್ರಧಾನಮಂತ್ರಿಗಳು ವಿರೋಧ ಪಕ್ಷದ ನಾಯಕರು ( ಲೋಕಸಭೆಯಲ್ಲಿ) ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿಗಳು ಇರುತ್ತಾರೆ.

Officers Adda

- Supreme court stepped into fill the constitutional vacuum

- The bill now seeks to address this vacuum

Officers Adda

- ಈ ಮಸೂದೆಯ ಪ್ರಕಾರ ಕ್ಯಾಬಿನೆಟ್ ಸೆಕ್ರೆಟರಿ ಅವರ ನೇತೃತ್ವದಲ್ಲಿ ಮೂರು ಜನರ ಶೋಧನಾ ಸಮಿತಿಯನ್ನು ರಚನೆ ಮಾಡಲಾಗುತ್ತದೆ

- ಈ ಶೋಧನಾ ಸಮಿತಿಯು ಚುನಾವಣಾ ಆಯೋಗಕ್ಕೆ ಆಯುಕ್ತರಾಗಲು ಅರ್ಹ ಇರುವ ಐದು ಜನರ ಹೆಸರನ್ನು ಶಿಫಾರಸ್ಸು ಮಾಡುತ್ತದೆ.

- ಆಯ್ಕೆ ಸಮಿತಿಯು ಪ್ರಧಾನ ಮಂತ್ರಿಗಳು ಲೋಕಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ಪ್ರಧಾನಮಂತ್ರಿಯವರು ಶಿಫಾರಸು ಮಾಡಿದ ಕ್ಯಾಬಿನೆಟ್ ದರ್ಜೆಯ ಮಂತ್ರಿಯನ್ನು ಒಳಗೊಂಡಿರುತ್ತದೆ

Officers Adda

- **ಸಂಸತ್ತು ಸುಪ್ರೀಂ ಕೋರ್ಟಿನ ಆದೇಶವನ್ನು ಬದಲಾಯಿಸಬಹುದೇ?**

- ಸುಪ್ರೀಂ ಕೋರ್ಟಿನ ಆದೇಶವನ್ನು ಮೀರಿ ಕಾನೂನು ಮಾಡುವ ಅಧಿಕಾರ ಸಂಸತ್ತಿಗೆ ಇದೆ

- ಆದರೆ ಸಂಸತ್ತು ಮಾಡುವ ಯಾವುದೇ ಕಾನೂನುಗಳು ಸಂವಿಧಾನದ ಚೌಕಟ್ಟಿನಲ್ಲಿರಬೇಕು ಮತ್ತು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರಬಾರದು

Officers Adda

- ಸುಪ್ರೀಂ ಕೋರ್ಟ್ ಹೇಳಿದ ಹಾಗೆ ಶಾಸಕಾಂಗದ ಮೇಲೆ ಈ ಸಮಿತಿ ರಚನೆ ಮಾಡಲು ಕಾನೂನು ಮಾಡುವ ಅವಶ್ಯಕತೆ ಇತ್ತು ಅದನ್ನೇ ಇಂದು ಸಂಸತ್ತು ಮಾಡಲು ಹೊರಟಿದೆ

- ಈ ಮಸೂದೆಗೆ ಕೆಲವು ಅಪವಾದಗಳು

- ಇಲ್ಲಿ ನ್ಯಾಯಾಂಗದ ಪಾತ್ರ ಕಡಿಮೆಗೊಳಿಸಲಾಗಿದೆ

- ಪ್ರಧಾನ ಮಂತ್ರಿಗಳು ಮತ್ತು ಅವರ ಶಿಫಾರಸ್ಸಿನ ಮೇರೆಗೆ ಕ್ಯಾಬಿನೆಟ್ ಮಂತ್ರಿ ಇವರಿಬ್ಬರು ತಮಗೆ ಬೇಕಾದ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು

- ಈ ಆಯ್ಕೆ ಸಮಿತಿಯಲ್ಲಿ ಕಾರ್ಯಾಂಗದ ಅಧಿಕಾರ ಹೆಚ್ಚಾಗಿದೆ

- ಇದರಿಂದ ಚುನಾವಣಾ ಆಯೋಗದ ಸ್ವಾತಂತ್ರ್ಯತೆ ಗೆ ದಕ್ಕೆ ಆಗಬಹುದು

Officers Adda

- ಪ್ರಧಾನಿ ನೇತೃತ್ವದ ಮೂವರು ಸದಸ್ಯರ ಸಮಿತಿಯು ಭವಿಷ್ಯದ ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರನ್ನು ನೇಮಿಸುವ ಜವಾಬ್ದಾರಿಯನ್ನು ವಹಿಸುತ್ತದೆ ಎಂದು ರಾಜ್ಯಸಭೆಯಲ್ಲಿ ಪರಿಚಯಿಸಲು ನಿಗದಿಪಡಿಸಲಾದ ಮಸೂದೆಯು ಪ್ರಸ್ತಾಪಿಸುತ್ತದೆ.

- ಈ ಸಮಿತಿಯು ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಕ್ಯಾಬಿನೆಟ್ ಸಚಿವರನ್ನು ಸಹ ಒಳಗೊಂಡಿರುತ್ತದೆ.

Officers Adda

- ಇದು ಮಾರ್ಚ್‌ನಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನಿಂದ ಭಿನ್ನವಾಗಿದೆ. ಸಮಿತಿಯ ರಚನೆಯು ಪ್ರಧಾನ ಮಂತ್ರಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿಗಳನ್ನು ಒಳಗೊಂಡಿರಬೇಕು ಎಂದು ಎಸ್‌ಸಿ ಹೇಳಿತ್ತು.

- ಚುನಾವಣಾ ಆಯುಕ್ತರಾದ ಅನುಪ್ ಚಂದ್ರ ಪಾಂಡೆ ಅವರು ಫೆಬ್ರವರಿ 14 ರಂದು 65 ನೇ ವಯಸ್ಸನ್ನು ತಲುಪಿದ ನಂತರ ನಿವೃತ್ತರಾಗಲಿರುವ ಕಾರಣ ಮುಂಬರುವ ವರ್ಷದಲ್ಲಿ ಚುನಾವಣಾ ಆಯೋಗದಲ್ಲಿ (EC) ಒಂದು ಹುದ್ದೆ ಖಾಲಿಯಾಗಲಿದೆ.

Officers Adda

- ಸುಪ್ರೀಂ ಕೋರ್ಟ್ ತನ್ನ ಮಾರ್ಚ್ ತೀರ್ಪಿನಲ್ಲಿ ಮುಖ್ಯ ಚುನಾವಣಾ ಆಯುಕ್ತ ಮತ್ತು ಚುನಾವಣಾ ಆಯುಕ್ತರ ನೇಮಕಾತಿಯನ್ನು 'executive ಗಳ' ಹಸ್ತಕ್ಷೇಪದಿಂದ ರಕ್ಷಿಸಲು ಉದ್ದೇಶಿಸಿದೆ.

- ಪ್ರಧಾನಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿಗಳನ್ನು ಒಳಗೊಂಡ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ನೇಮಕಾತಿಗಳನ್ನು ರಾಷ್ಟ್ರಪತಿಗಳು ನಡೆಸುತ್ತಾರೆ, ಎಂದು ನ್ಯಾಯಾಲಯ ನಿರ್ಧರಿಸಿದೆ.

- ನ್ಯಾಯಮೂರ್ತಿ ಕೆ.ಎಂ.ಜೋಸೆಫ್ ನೇತೃತ್ವದ ಐವರು ನ್ಯಾಯಾಧೀಶರನ್ನೊಳಗೊಂಡ ಸಾಂವಿಧಾನಿಕ ಪೀಠವು ಅವಿರೋಧ ನಿರ್ಧಾರಕ್ಕೆ ಬಂದಿದ್ದು, ಸಂಸತ್ತು ಈ ವಿಷಯವನ್ನು ತಿಳಿಸುವ ಕಾನೂನನ್ನು ಜಾರಿಗೊಳಿಸುವವರೆಗೆ ಈ ತತ್ವವು ಪರಿಣಾಮಕಾರಿಯಾಗಿರುತ್ತದೆ ಎಂದು ದೃಢಪಡಿಸಿತು.

Officers Adda

- ಸುಪ್ರೀಂ ಕೋರ್ಟ್ ತೀರ್ಪಿನ ಮೊದಲು, ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರನ್ನು ಸರ್ಕಾರದ ಶಿಫಾರಸಿನ ಮೇರೆಗೆ ರಾಷ್ಟ್ರಪತಿಗಳು ನೇಮಿಸುತ್ತಿದ್ದರು.

Officers Adda

- ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರು (ಸೇವಾ ನಿಬಂಧನೆಗಳು ಮತ್ತು ಅಧಿಕಾರದ ಅವಧಿ) ಮಸೂದೆಯ ಪ್ರಕಾರ, ಮುಖ್ಯ ಚುನಾವಣಾ ಆಯುಕ್ತರು ಇತರ ಚುನಾವಣಾ ಆಯುಕ್ತರನ್ನು ಪ್ರಧಾನ ಮಂತ್ರಿಗಳನ್ನು ಒಳಗೊಂಡಿರುವ ಆಯ್ಕೆ ಸಮಿತಿಯ ಶಿಫಾರಸಿನ ಮೇರೆಗೆ ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ.

- 1. PM – ಅಧ್ಯಕ್ಷರು
- 2. ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ (LoP) ಮತ್ತು
- 3. ಪ್ರಧಾನ ಮಂತ್ರಿಯಿಂದ ನಾಮನಿರ್ದೇಶನಗೊಂಡ ಕೇಂದ್ರ ಕ್ಯಾಬಿನೆಟ್ ಮಂತ್ರಿ.

- ಸಂಸತ್ತಿನ ಕೆಳಮನೆಯಲ್ಲಿ ಯಾವುದೇ LoP ಇಲ್ಲದಿದ್ದರೆ, ಲೋಕಸಭೆಯಲ್ಲಿ ವಿರೋಧ ಪಕ್ಷದಲ್ಲಿರುವ ಏಕೈಕ ದೊಡ್ಡ ಪಕ್ಷದ ನಾಯಕನನ್ನು LOP ಎಂದು ಪರಿಗಣಿಸಲಾಗುತ್ತದೆ.

Officers Adda

- ಕ್ಯಾಬಿನೆಟ್ ಕಾರ್ಯದರ್ಶಿ ನೇತೃತ್ವದ 'ಶೋಧನಾ ಸಮಿತಿ' ಮತ್ತು ಚುನಾವಣಾ ವ್ಯವಹಾರಗಳಲ್ಲಿ ಪರಿಣತಿಯನ್ನು ಹೊಂದಿರುವ ಕಾರ್ಯದರ್ಶಿಗಿಂತ ಕಡಿಮೆ ಶ್ರೇಣಿಯ ಇನ್ನಿಬ್ಬರು ಸದಸ್ಯರನ್ನು ಒಳಗೊಂಡಂತೆ ಐದು ಅಭ್ಯರ್ಥಿಗಳ ಪಟ್ಟಿಯನ್ನು ಸಂಗ್ರಹಿಸುತ್ತದೆ.

- ಈ ಪಟ್ಟಿಯನ್ನು ನಂತರ ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರ ನೇಮಕಕ್ಕೆ ಸಂಬಂಧಿಸಿದಂತೆ ಚರ್ಚೆಗಾಗಿ ಆಯ್ಕೆ ಸಮಿತಿಗೆ ಪ್ರಸ್ತುತಪಡಿಸಲಾಗುತ್ತದೆ.

Officers Adda

OFFICERS ADDA

# PDO

# CRASH COURSE

ONLINE CLASSES

60 ದಿನಗಳ ಕ್ರ್ಯಾಶ್ ಕೋರ್ಸ್

LIVE AND RECORDED CLASSES

PAPER 2
ಸಂಪೂರ್ಣ ಪಠ್ಯಕ್ರಮ ಮುಗಿಸಿಕೊಡಲಾಗುತ್ತದೆ

PAPER 1 & PAPER 2
MCQ TESTS WITH EXPLANATION

LAST DATE TO JOIN
AUGUST 14, 2023

CONTACT

8217546761/8217583629

## Competitive Examination – Additional Details

Question paper will be both in Kannada and English Language (except General English and General Kannada (ಸಾಮಾನ್ಯ ಕನ್ನಡ))

| Paper | Subjects | No. Of Questions | Marks | Details | | |
|---|---|---|---|---|---|---|
| Paper – 1 | ಸಾಮಾನ್ಯ ಜ್ಞಾನ<br>General Knowledge | 40 | 80 | Each question carry Two marks | Two Hours | Objective Multiple Choice |
| | General English | 30 | 60 | | | |
| | ಸಾಮಾನ್ಯ ಕನ್ನಡ | 30 | 60 | | | |
| | Total | 100 | 200 | | | |

| Paper | Subjects | No. Of Questions | Marks | Details | | |
|---|---|---|---|---|---|---|
| Paper – 2 | "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಜ್ಞಾನ – ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ೧೯೯೩ ಹಾಗೂ ನಿಯಮಗಳು ಮತ್ತು ತಿದ್ದುಪಡಿಗಳಂತೆ" | 100 | 200 | Each question carry Two marks | Two Hours | Objective Multiple Choice |

Officers Adda

# LAST DATE TO JOIN
# AUG 14,2023

- **MINI ISSUES**

Officers Adda

# NATIONAL ISSUES



# RBI ನ MPC ಸಭೆ




Officers Adda

- ಭಾರತೀಯ ರಿಸರ್ವ್ ಬ್ಯಾಂಕ್ (RBI) ಗವರ್ನರ್, ಶಕ್ತಿಕಾಂತ ದಾಸ್ ಅವರು 2024 ರ ಆರ್ಥಿಕ ವರ್ಷದ ಮೂರನೇ ಹಣಕಾಸು ನೀತಿಯನ್ನು ಘೋಷಿಸಲು ನಿರ್ಧರಿಸಿದ್ದಾರೆ.
- ಆರು ಸದಸ್ಯರ ಹಣಕಾಸು ನೀತಿ ಸಮಿತಿ (ಎಂಪಿಸಿ) ಆಗಸ್ಟ್ 8 ರಿಂದ 10 ರವರೆಗೆ ಮೂರು ದಿನಗಳ ಸಭೆ ನಡೆಸಿತು.
- ಹಿಂದಿನ ಎರಡು ನೀತಿ ಪರಾಮರ್ಶೆಗಳು ಏಪ್ರಿಲ್ ಮತ್ತು ಜೂನ್‌ನಲ್ಲಿ ನಡೆದಿದ್ದವು. ಜೂನ್ 2023 ರಲ್ಲಿ ಇತ್ತೀಚಿನ ವಿಮರ್ಶೆಯಲ್ಲಿ, RBI MPC ಪ್ರಮುಖ ರೆಪೊ ದರವನ್ನು 6.50 ಪ್ರತಿಶತದಲ್ಲಿ ನಿರ್ವಹಿಸಲು ಆಯ್ಕೆ ಮಾಡಿದೆ.

Officers Adda

- ವಿತ್ತೀಯ ನೀತಿ ಸಮಿತಿಯು ಮುಖ್ಯವಾಗಿ ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶವನ್ನು ಹೊಂದಿರುತ್ತದೆ.
- ಈ ಸಮಿತಿಯು ಆರು ಜನ ಸದಸ್ಯರನ್ನು ಹೊಂದಿದ್ದು ಸಮಿತಿಯ ಅಧ್ಯಕ್ಷರು ಆರ್ ಬಿ ಐ ನ ಗವರ್ನರ್ ಆಗಿರುತ್ತಾರೆ
- ಈ ಸಮಿತಿಯನ್ನು 2016ರಲ್ಲಿ ಸ್ಥಾಪನೆ ಮಾಡಲಾಗಿದೆ
- ಈ ಸಮಿತಿಯು ಒಂದು ವರ್ಷದಲ್ಲಿ ಕನಿಷ್ಠ ನಾಲ್ಕು ಬಾರಿ ಸಭೆ ಸೇರುತ್ತದೆ
- ಈ ಸಮಿತಿಯಲ್ಲಿ ಆರ್‌ಬಿಐ ಪರವಾಗಿ ಮೂರು ಜನರು ಮತ್ತು ಭಾರತ ಸರ್ಕಾರದ ಪರವಾಗಿ ಮೂರು ಜನ ಸದಸ್ಯರು ಇರುತ್ತಾರೆ

Officers Adda

- ICRR
- Incremental cash reserve ratio
- ಶಾಸನಬದ್ಧ ದ್ರವ್ಯತೆಯ ಅನುಪಾತವನ್ನು ಹೆಚ್ಚಿಸಲಾಗಿದೆ.
- ಇತ್ತೀಚೆಗೆ 2000 ಮುಖಬೆಲೆಯ ನೋಟುಗಳನ್ನು ಬ್ಯಾನ್ ಮಾಡಲಾಗಿದ್ದು ಅವುಗಳ ಸಂಗ್ರಹ ಬ್ಯಾಂಕುಗಳಲ್ಲಿ ಹೆಚ್ಚಾಗಿದೆ.
- ಒಂದು ವೇಳೆ ಈ ದುಡ್ಡನ್ನು ಬ್ಯಾಂಕುಗಳು ಸಾಲ ಕೊಡಲು ಆರಂಭಿಸಿದರೆ ಮತ್ತಷ್ಟು ಹಣದುಬ್ಬರ ಏರುವ ಸಾಧ್ಯತೆ ಇದೆ.
- ಅದಕ್ಕಾಗಿ ಬ್ಯಾಂಕುಗಳು ಈಗಾಗಲೇ ಇರುವ ಶಾಸನ ಬದ್ಧ ದ್ರವ್ಯತೆಯ ಅನುಪಾತ ಹಾಗೂ ಹೆಚ್ಚುವರಿಯಾಗಿ ಶೇಕಡ ಹತ್ತರಷ್ಟು ಹಣವನ್ನು ಆರ್ಬಿಐ ನಲ್ಲಿ ಜಮಾಗೊಳಿಸಬೇಕಾಗಿದೆ
- ಈ ಹಣಕ್ಕೆ ಯಾವುದೇ ರೀತಿಯ ಬಡ್ಡಿ ಇರುವುದಿಲ್ಲ

Officers Adda

- ಎಂಪಿಸಿ ಸಭೆಯಲ್ಲಿ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ₹2,000 ನೋಟು ಹಿಂಪಡೆಯುವುದು ತಾತ್ಕಾಲಿಕ ಕ್ರಮವಾಗಿದೆ ಎಂದು ಹೇಳಿದ್ದಾರೆ.

- ಒಮ್ಮೆ ದೇಶದಿಂದ ₹ 2,000 ಮುಖಬೆಲೆಯ ಸಂಪೂರ್ಣ ಹಿಂಪಡೆಯುವಿಕೆ ವ್ಯವಸ್ಥೆಯಲ್ಲಿ "ಸಾಕಷ್ಟು ದ್ರವ್ಯತೆ" ಇರುತ್ತದೆ ಎಂದು ಅವರು ಹೇಳಿದರು.

Officers Adda

- ಈ ವರ್ಷದ ಮೇ ತಿಂಗಳಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್ (RBI) ₹2,000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯಲು ನಿರ್ಧರಿಸಿತು ಮತ್ತು ಎಲ್ಲಾ ನೋಟುಗಳನ್ನು ಸೆಪ್ಟೆಂಬರ್ 30 ರ ಮೊದಲು ಬದಲಾಯಿಸಬೇಕು ಎಂದು ಹೇಳಿದೆ.

- **ಬ್ಯಾಂಕ್‌ಗಳು 10% ರಷ್ಟು 'ಹೆಚ್ಚಿದ' CRR ಅನ್ನು ನಿರ್ವಹಿಸಬೇಕಾಗುತ್ತದೆ:–**

- ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಮೇ 19 ಮತ್ತು ಜುಲೈ 28 ರ ನಡುವೆ ತಮ್ಮ ನಿವ್ವಳ ಬೇಡಿಕೆ ಮತ್ತು ಸಮಯದ ಹೊಣೆಗಾರಿಕೆಗಳಲ್ಲಿ (ಎನ್‌ಡಿಟಿಎಲ್) ಏರಿಕೆಯಾದಾಗ ಬ್ಯಾಂಕುಗಳು 10% ರಷ್ಟು ಹೆಚ್ಚುತ್ತಿರುವ ನಗದು ಮೀಸಲು ಅನುಪಾತವನ್ನು (ಸಿಆರ್‌ಆರ್) ಎತ್ತಿಹಿಡಿಯುವ ಅಗತ್ಯವಿದೆ ಎಂದು ಘೋಷಿಸಿದರು.

Officers Adda

# NATIONAL ISSUES



# “ಕೇರಳಂ"



Officers Adda

- ಸ್ಥಳೀಯ ಮಲಯಾಳಂ ಭಾಷೆಯಲ್ಲಿ ಕೇರಳವನ್ನು ಯಾವಾಗಲೂ "ಕೇರಳಂ" ಎಂದು ಕರೆಯಲಾಗುತ್ತದೆ. ಈ ಹೆಸರು ಪ್ರದೇಶದ ಸಂಸ್ಕೃತಿ ಮತ್ತು ಪರಂಪರೆಯೊಂದಿಗೆ ಆಳವಾಗಿ ಹೆಣೆದುಕೊಂಡಿದೆ ಮತ್ತು ಈ ಸಾಂಪ್ರದಾಯಿಕ ಹೆಸರನ್ನು ಅಧಿಕೃತಗೊಳಿಸಲು ಈಗ ಬೇಡಿಕೆಯಿದೆ.

- ಇತ್ತೀಚೆಗೆ, ಕೇರಳ ಮುಖ್ಯಮಂತ್ರಿಯು ಕೇರಳವನ್ನು ಅದರ ಸಾಂಪ್ರದಾಯಿಕ ಮಲಯಾಳಂ ಮಾನಿಕರ್ "ಕೇರಳಂ" ಎಂದು ಮರುನಾಮಕರಣ ಮಾಡಲು ರಾಜ್ಯ ವಿಧಾನಸಭೆಯಲ್ಲಿ ನಿರ್ಣಯವನ್ನು ಮಂಡಿಸಿದರು.

- ಕೇರಳ ತನ್ನ ರಾಜ್ಯದ ಹೆಸರನ್ನು ಬದಲಿಸುವ ಪ್ರಸ್ತಾಪವನ್ನು 2010ರಲ್ಲೂ ಮಾಡಿತ್ತು ಆದರೆ ಅದು ಸಂಸತ್ತಿನಲ್ಲಿ ವಿಫಲವಾಗಿತ್ತು

Officers Adda

- ರಾಜ್ಯದ ಶಾಸಕಾಂಗ ಮಂಡಳಿಯು ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿತು.

- ಸಂವಿಧಾನವು ಆರ್ಟಿಕಲ್ 3 ರ ಅಡಿಯಲ್ಲಿ, ಅಸ್ತಿತ್ವದಲ್ಲಿರುವ ರಾಜ್ಯಗಳ ಹೆಸರನ್ನು ಮರುಹೆಸರಿಸುವ ಅಥವಾ ಬದಲಾಯಿಸುವ ಬಗ್ಗೆ ವ್ಯವಹರಿಸುತ್ತದೆ.

- ಐತಿಹಾಸಿಕವಾಗಿ, ಭಾರತದ ರಾಜ್ಯಗಳು ಭಾಷಾ ಮಾನದಂಡಗಳ ಆಧಾರದ ಮೇಲೆ ರೂಪುಗೊಂಡವು. ಈ ಪುನರ್ರಚನೆಯು ನವೆಂಬರ್ 1, 1956 ರಂದು ಸಂಭವಿಸಿತು. ಈ ದಿನದ ಪ್ರಾಮುಖ್ಯತೆಯನ್ನು ಸೂಚಿಸುವ ಮೂಲಕ, ಕೇರಳವು ಪ್ರತಿ ವರ್ಷ ಇದೇ ದಿನಾಂಕದಂದು "ಕೇರಳ ದಿನ" ವನ್ನು ಆಚರಿಸುತ್ತದೆ.

Officers Adda

- ಕೇರಳ ಎಂಬ ಹೆಸರು ಅಶೋಕನ ಶಾಸನದಲ್ಲಿ ಉಲ್ಲೇಖವಾಗಿದೆ
- ಸ್ಥಳೀಯ ಸಾಮ್ರಾಟ ಕೇರಳ ಪುತ್ರ ಅಥವಾ ಚೇರರ ಪುತ್ರ ಎಂಬ ಉಲ್ಲೇಖವಿದೆ ಇದು ಚೇರ ಸಾಮ್ರಾಜ್ಯದ ಕುರಿತು ಹೇಳುತ್ತದೆ.
- ಕೇರಳ ಎಂಬ ಪದವು ಚೇರಂ ಎಂಬ ಪದದಿಂದ ಬಂದಿದೆ
- ಚೆರಂ ಎಂಬ ಪದವು ಕನ್ನಡದಲ್ಲಿ ಕೆನರೀಸ್ ಎಂಬ ಪದದಿಂದ ಬಂದಿದೆ
- ಚೆರಂ ಎಂದರೆ ಗೋಕರ್ಣ ಮತ್ತು ಕನ್ಯಾಕುಮಾರಿಯ ನಡುವಿನ ಪ್ರದೇಶ.
- ಚೇರ ಎಂದರೆ ಕೂಡುವುದು, ಅಲಂ ಎಂದರೆ ಭೂಮಿ

Officers Adda




Officers Adda

- **ಮಲಯಾಳಿ** ಜನರು ಅನೇಕ ರಾಜ ಮನೆತನಗಳ ಆಳ್ವಿಕೆಯಲ್ಲಿ ಇದ್ದರು

- **1920 ರಲ್ಲಿ ಕೇರಳ ಏಕೀಕರಣ ಚಳುವಳಿ** ಆರಂಭವಾಯಿತು ನಂತರ ಮಲಯಾಳಂ ಮಾತನಾಡುವ ಜನರಿಗೆ ಪ್ರತ್ಯೇಕ ರಾಜ್ಯದ ಕೂಗು ಹುಟ್ಟಿಕೊಂಡಿತು.

- **ಮಲಬಾರ ಕೊಚ್ಚಿ ಮತ್ತು ಟ್ರಾವೆ0 ಕೋರನ್ನು** ಒಂದೇ ಪ್ರದೇಶದಲ್ಲಿ ಸೇರಿಸುವ ಉದ್ದೇಶ ಹೊಂದಿತ್ತು

- **1956 ನವೆಂಬರ್ 1** ರಂದು ಕೇರಳ ರಾಜ್ಯದ ರಚನೆಯಾಯಿತು

Officers Adda

- ನಗರಗಳ ಹೆಸರನ್ನು ಬದಲಾಯಿಸುವ ಅಧಿಕಾರ ರಾಜ್ಯಗಳಿಗಿರುತ್ತದೆ ಆದರೆ ರಾಜ್ಯದ ಹೆಸರನ್ನು ಬದಲಾಯಿಸುವ ಅಧಿಕಾರ ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿ ಬರುತ್ತದೆ

- ಇದಕ್ಕೆ ರಾಜ್ಯ ಸರ್ಕಾರದ ಶಿಫಾರಸು ಮಾಡಬೇಕು ನಂತರ ಸಂವಿಧಾನ ಬದಲಾವಣೆಯ ಅವಶ್ಯಕತೆ ಇದೆ

- No objection certificate required from ministry of railways,intelligence bureau, department of posts, survey of India and register general of India

Officers Adda

- ಈ ಹಿಂದೆ ರಾಜ್ಯಗಳ ಮರುನಾಮಕರಣ
- ಒರಿಸ್ಸಾ ರಾಜ್ಯವು ಅಧಿಕೃತವಾಗಿ ಒಡಿಶಾ ಎಂದು ಮರುನಾಮಕರಣಗೊಂಡಿತು
- 2011ರಲ್ಲಿ ಸಂವಿಧಾನ ಬದಲಾವಣೆಯ ಮೂಲಕ ಇದನ್ನು ಮಾಡಲಾಯಿತು
- ಇವರಿಗೆ ಪಶ್ಚಿಮ ಬಂಗಾಳದ ಹೆಸರನ್ನು ಮರುನಾಮಕರಣ ಮಾಡಲು ಮಮತಾ ಬ್ಯಾನರ್ಜಿ ಸಾಕಷ್ಟು ಪ್ರಯತ್ನ ಮಾಡಿದ್ದಾರೆ.
- ಪಶ್ಚಿಮ ಬಂಗ ,ಬೆಂಗಾಲ್, ಬಾಂಗ್ಲಾ ಆದರೆ ಯಾವ ಪ್ರಯತ್ನಗಳು ಸಫಲವಾಗಿಲ್ಲ.
- ಪಶ್ಚಿಮ ಬಂಗಾಳದ ಈ ಪ್ರಯತ್ನವನ್ನು ಕೇಂದ್ರ ಸರ್ಕಾರ ಈವರೆಗೆ ಸುಮಾರು ನಾಲ್ಕು ಬಾರಿ ತಿರಸ್ಕರಿಸಿದೆ

Officers Adda

- What are the differences between Western ghats and Himalayas?
- ಪಶ್ಚಿಮ ಘಟ್ಟಗಳು ಮತ್ತು ಹಿಮಾಲಯಗಳಿಗಿರುವ ವ್ಯತ್ಯಾಸಗಳು ಯಾವವು?





- ಪಶ್ಚಿಮ ಘಟ್ಟಗಳು ಸಹ್ಯಾದ್ರಿ ಪರ್ವತಗಳೆಂದು ಕರೆಯುತ್ತಾರೆ ಇವುಗಳು ಭಾರತದ ಪಶ್ಚಿಮ ಕರಾವಳಿಗೆ ಸಮಾನಾಂತರವಾಗಿ ಹರಡಿಕೊಂಡಿವೆ
- ಸುಮಾರು 1600 ಕಿ.ಮೀ ಹರಡಿಕೊಂಡಿದೆ
- ಭಾರತದ 6 ರಾಜ್ಯಗಳಲ್ಲಿವೆ
- ಹಿಮಾಲಯ ಪರ್ವತ ಶ್ರೇಣಿಗಳು ಉತ್ತರ ಭಾರತದಲ್ಲಿ ಬರುವ ಹಾಗೂ ನೇಪಾಳ ಭೂತಾನ್ ಚೀನಾ ಪಾಕಿಸ್ತಾನದಲ್ಲಿ ಹರಡಿಕೊಂಡಿರುವ ಜಗತ್ತಿನ ಅತಿ ಎತ್ತರದ ಪರ್ವತ ಶ್ರೇಣಿಗಳು
- ಇವುಗಳು ಸುಮಾರು 2400 ಕಿಲೋಮೀಟರ್ ವ್ಯಾಪಿಸಿವೆ.
- ಪಶ್ಚಿಮ ಘಟ್ಟಗಳು ಹಿಮಾಲಯ ಪರ್ವತ ಶ್ರೇಣಿ ಗಳಿಗಿಂತ ಹಳೆಯದಾಗಿದೆ.

Officers Adda

- ಹಿಮಾಲಯ ಪರ್ವತ ಶ್ರೇಣಿಗಳು ಸುಮಾರು **150 ಮಿಲಿಯನ್ ವರ್ಷಗಳ** ಹಿಂದೆ ನಿರ್ಮಾಣವಾಗಿದೆ
- ಭಾರತ ಮತ್ತು ಯೂರೆಸಿಯಾದ **ಭೂಭಾಗಗಳ ಘರ್ಷಣೆಯಿಂದ** ಹಿಮಾಲಯ ಪರ್ವತ ಶ್ರೇಣಿಗಳು ಜನಿಸಿವೆ.
- ಹಿಮಾಲಯ ಪರ್ವತ ಶ್ರೇಣಿಗಳು **ಸುಮಾರು 40 ರಿಂದ 50** ಮಿಲಿಯನ್ ವರ್ಷಗಳ ಹಿಂದೆ ನಿರ್ಮಾಣವಾಗಿದೆ.
- ಹಿಮಾಲಯ ಪರ್ವತಗಳಿಗೆ ಹೋಲಿಸಿದರೆ ಪಶ್ಚಿಮ ಘಟ್ಟಗಳು **ಕಡಿಮೆ ಎತ್ತರವನ್ನು ಹೊಂದಿದೆ.**
- ಪಶ್ಚಿಮ ಘಟ್ಟಗಳಲ್ಲಿ **ಅನಾಮುಡಿ ಅತಿ ಎತ್ತರದ ಬೆಟ್ಟವಾಗಿದೆ ಹಾಗೂ ಹಿಮಾಲಯದಲ್ಲಿ ಎವರೆಸ್ಟ್** ಪರ್ವತ ಅತಿ ಎತ್ತರದಾಗಿದೆ.
- ಪಶ್ಚಿಮ ಘಟ್ಟಗಳು ಮತ್ತು ಹಿಮಾಲಯ ಪರ್ವತ ಶ್ರೇಣಿಗಳು ಭಾರತದ **ವಾಯುಗುಣದ ಮೇಲೆ ತಮ್ಮದೇ ಆದ ಪ್ರಭಾವವನ್ನು** ಬೀರುತ್ತವೆ

Officers Adda




Officers Adda

OFFICERS ADDA

# SANKALPA 6.0

## KAS & IAS MAINS BATCH

KANNADA MEDIUM

LAST DATE TO JOIN : AUGUST 21,2023

CONTACT: 8217546761/8217583629



# LAST DATE TO JOIN

# AUG 21, 2023

- # MICRO ISSUES

## ISSUES BASED COLOURS

Officers Adda

# ಅತಿಥಿ ಪೋರ್ಟಲ್

- ವಲಸೆ ಕಾರ್ಮಿಕರು ಮಕ್ಕಳ ವಿರುದ್ಧ ಎಸಗಿದ್ದಾರೆಂದು ಹೇಳಲಾದ ಇತ್ತೀಚಿನ ಲೈಂಗಿಕ ಅಪರಾಧಗಳಿಗೆ ಪ್ರತಿಕ್ರಿಯೆಯಾಗಿ, ಸರ್ಕಾರವು 'ಅತಿಥಿ ಪೋರ್ಟಲ್' ಅನ್ನು ಪ್ರಾರಂಭಿಸಿದೆ.
- ಕೇರಳ ಸರ್ಕಾರವು ನೋಂದಣಿ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಮತ್ತು ರಾಜ್ಯದಲ್ಲಿ ವಲಸೆ ಕಾರ್ಮಿಕರಿಗೆ ವಿಶಿಷ್ಟ ಗುರುತಿನ ವ್ಯವಸ್ಥೆಯನ್ನು ಪರಿಚಯಿಸಲು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.
- ಈ ಬಳಕೆದಾರ ಸ್ನೇಹಿ ವೆಬ್ ಪೋರ್ಟಲ್ "ಅತಿಥಿ ಕೆಲಸಗಾರರ" ನೋಂದಣಿಯನ್ನು ಸುವ್ಯವಸ್ಥಿತಗೊಳಿಸಲು ಮತ್ತು ಅವರ ಸಾಮಾಜಿಕ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಗುರಿಯನ್ನು ಹೊಂದಿದೆ.

Officers Adda

- ಕೇರಳ ಸರ್ಕಾರದ ಒಂದು ನವೀನ ಉಪಕ್ರಮವಾದ ಅತಿಥಿ ಪೋರ್ಟಲ್ ಅನ್ನು ಪ್ರಾರಂಭಿಸಲಾಗುವುದು. ವಲಸೆ ಕಾರ್ಮಿಕರ ನೋಂದಣಿಯನ್ನು ವೇಗಗೊಳಿಸುವುದು ಇದರ ಪ್ರಾಥಮಿಕ ಉದ್ದೇಶವಾಗಿದೆ.

- ಪೋರ್ಟಲ್‌ನಿಂದ ಯಾವುದೇ ಅತಿಥಿ ಕೆಲಸಗಾರರು ಹೊರಗುಳಿಯದಂತೆ ನೋಡಿಕೊಳ್ಳುವ ಪ್ರಯತ್ನದಲ್ಲಿ, ಕೇರಳ ಸರ್ಕಾರವು ರೈಲ್ವೇ ನಿಲ್ದಾಣಗಳಲ್ಲಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ಯೋಜಿಸುತ್ತಿದೆ,

- ಅತಿಥಿ ಪೋರ್ಟಲ್ ಅನ್ನು ಆಗಸ್ಟ್ 7 ರಂದು ರಾಜ್ಯಾದ್ಯಂತ ಪ್ರಾರಂಭಿಸಲು ನಿರ್ಧರಿಸಲಾಗಿದೆ ಮತ್ತು ಇದು ರಾಜ್ಯಾದ್ಯಂತ ಅತಿಥಿ ಕಾರ್ಮಿಕರ ನೋಂದಣಿಯನ್ನು ಸುವ್ಯವಸ್ಥಿತಗೊಳಿಸುವ ನಿರೀಕ್ಷೆಯಿದೆ.

Officers Adda

# ಕ್ವಿಟ್ ಇಂಡಿಯಾ ಚಳುವಳಿ ದಿನ 2023

- ಆಗಸ್ಟ್ ಚಳುವಳಿ ಅಥವಾ ಭಾರತ್ ಚೋಡೋ ಆಂದೋಲನ್ ಎಂದೂ ಕರೆಯಲ್ಪಡುವ ಕ್ವಿಟ್ ಇಂಡಿಯಾ ಚಳುವಳಿಯು ಮಹಾತ್ಮ ಗಾಂಧಿಯವರು ಪ್ರಾರಂಭಿಸಿದ ನಾಗರಿಕ ಅಸಹಕಾರ ಚಳುವಳಿಯಾಗಿದ್ದು , ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯನ್ನು ಕೊನೆಗೊಳಿಸಲು ಮತ್ತು ಸಂಪೂರ್ಣ ಸ್ವಾತಂತ್ರ್ಯವನ್ನು ಸಾಧಿಸುವ ಗುರಿಯೊಂದಿಗೆ 8 ನೇ ಆಗಸ್ಟ್ 1942 ರಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬೆಂಬಲಿಸಿತು.

- 2023 ಕ್ವಿಟ್ ಇಂಡಿಯಾ ಚಳುವಳಿಯ 81 ನೇ ವಾರ್ಷಿಕೋತ್ಸವವನ್ನು ಸೂಚಿಸುತ್ತದೆ.

Officers Adda

- ಈ ದಿನ, ಆಗಸ್ಟ್ 8, 1942 ರಂದು, ಈಗ ಆಗಸ್ಟ್ ಕ್ರಾಂತಿ ಮೈದಾನ ಎಂದು ಜನಪ್ರಿಯವಾಗಿರುವ ಗೋವಾಲಿಯಾ ಟ್ಯಾಂಕ್ ಮೈದಾನದಲ್ಲಿ ಗಾಂಧಿಯವರು ಪ್ರಸಿದ್ಧವಾದ "ಮಾಡು ಇಲ್ಲವೇ ಮಡಿ" ಭಾಷಣ ಮಾಡಿದರು .

- ಮುಂಬೈ ಮೇಯರ್ ಆಗಿ ಸೇವೆ ಸಲ್ಲಿಸಿದ ಸಮಾಜವಾದಿ ಮತ್ತು ಟ್ರೇಡ್ ಯೂನಿಯನಿಸ್ಟ್ ಯೂಸುಫ್ ಮೆಹೆರಲ್ಲಿ ಅವರು ’ಕ್ವಿಟ್ ಇಂಡಿಯಾ’ ಘೋಷಣೆಯನ್ನು ರಚಿಸಿದ್ದಾರೆ .

- ಮೆಹೆರಲಿ ಅವರು "ಸೈಮನ್ ಗೋ ಬ್ಯಾಕ್" ಎಂಬ ಘೋಷಣೆಯನ್ನು ಸಹ ರಚಿಸಿದ್ದರು.

Officers Adda

# ವಿಶ್ವ ಬುಡಕಟ್ಟು ದಿನ 2023

- ಡಿಸೆಂಬರ್ 1994 ರಲ್ಲಿ UN ಜನರಲ್ ಅಸೆಂಬ್ಲಿಯ ನಿರ್ಣಯದ ಪ್ರಕಾರ, ವಿಶ್ವ ಬುಡಕಟ್ಟು ದಿನ ಎಂದೂ ಕರೆಯಲ್ಪಡುವ ವಿಶ್ವದ ಸ್ಥಳೀಯ ಜನರ ಅಂತರರಾಷ್ಟ್ರೀಯ ದಿನವನ್ನು ವಾರ್ಷಿಕವಾಗಿ ಆಗಸ್ಟ್ 9 ರಂದು ಆಚರಿಸಲಾಗುತ್ತದೆ.

- ಇದು ವಿಶ್ವಾದ್ಯಂತ ಸ್ಥಳೀಯ ಜನಸಂಖ್ಯೆಯ ಹಕ್ಕುಗಳನ್ನು ಉತ್ತೇಜಿಸುವಲ್ಲಿ ಮತ್ತು ರಕ್ಷಿಸುವಲ್ಲಿ ಅದರ ಮಹತ್ವವನ್ನು ಎತ್ತಿ ತೋರಿಸುತ್ತದೆ.

Officers Adda



- The theme of World Tribal Day in 2023 is "Indigenous Youth as Agents of Change for Self-determination."

- ಸಮಾಜದಲ್ಲಿ ಅತ್ಯಂತ ಹಿಂದುಳಿದ ಸ್ಥಳೀಯ ಜನರು ಇರುವುದರಿಂದ ದಿನವು ಅವಶ್ಯಕವಾಗಿದೆ .

- ಯುಎನ್ ಅಂದಾಜಿನ ಪ್ರಕಾರ ಸ್ಥಳೀಯ ಜನರು ಜಾಗತಿಕ ಜನಸಂಖ್ಯೆಯ 5% ಕ್ಕಿಂತ ಕಡಿಮೆಯಿದ್ದರೂ , ಅವರು ವಿಶ್ವದ 15% ಬಡ ಜನರಾಗಿದ್ದಾರೆ.

Officers Adda

## CBI ಅಕಾಡೆಮಿ ಇಂಟರ್ ಪೋಲ್ ಗ್ಲೋಬಲ್ ಅಕಾಡೆಮಿ ನೆಟ್ ವರ್ಕ್‌ಗೆ ಸೇರುತ್ತದೆ.

- ಅಪರಾಧ ತನಿಖೆ ಮತ್ತು ಕಾನೂನು ಜಾರಿ ತರಬೇತಿಯಲ್ಲಿ ಪ್ರಮುಖ ಸಂಸ್ಥೆಯಾದ ಸೆಂಟ್ರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಶನ್ (ಸಿಬಿಐ) ಅಕಾಡೆಮಿ, ಇಂಟರ್‌ಪೋಲ್ ಗ್ಲೋಬಲ್ ಅಕಾಡೆಮಿ ನೆಟ್‌ವರ್ಕ್‌ಗೆ ಅದರ 10 ನೇ ಸದಸ್ಯರಾಗಿ ಸೇರಿಕೊಂಡಿದೆ
- ಈ ಮಹತ್ವದ ಕ್ರಮವು ಅಕಾಡೆಮಿಯ ಜಾಗತಿಕ ಪ್ರಭಾವವನ್ನು ಹೆಚ್ಚಿಸುತ್ತದೆ ಮತ್ತು ಪರಿಣಾಮಕಾರಿ ಜಂಟಿ ಉಪಕ್ರಮಗಳು ಮತ್ತು ಸಾಮರ್ಥ್ಯ ನಿರ್ಮಾಣಕ್ಕೆ ದಾರಿ ಮಾಡಿಕೊಡುತ್ತದೆ
- ಇದು ಕಾನೂನು ಜಾರಿ ತರಬೇತಿಗೆ ಜಾಗತಿಕ ವಿಧಾನವನ್ನು ಮುನ್ನಡೆಸುವಲ್ಲಿ ಇಂಟರ್‌ಪೋಲ್ ಅನ್ನು ಬೆಂಬಲಿಸಲು 2019 ರಲ್ಲಿ ಇಂಟರ್‌ಪೋಲ್ ಪ್ರಾರಂಭಿಸಿದ ಉಪಕ್ರಮವಾಗಿದೆ .

- CBI ಅಕಾಡೆಮಿಯು CBI ಗಾಗಿ ತರಬೇತಿ ಸಂಸ್ಥೆಯಾಗಿದ್ದು , ಇದು ಭಾರತದ ಪ್ರಧಾನ ತನಿಖಾ ಸಂಸ್ಥೆಯಾಗಿದೆ.

- ಸಿಬಿಐ ಅಕಾಡೆಮಿಯನ್ನು 1996 ರಲ್ಲಿ ಸ್ಥಾಪಿಸಲಾಯಿತು ಮತ್ತು ಇದು ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿದೆ

- ಇದು ಉನ್ನತ ಮಟ್ಟದ ವೃತ್ತಿಪರತೆ, ನಿಷ್ಪಕ್ಷಪಾತ, ರಾಷ್ಟ್ರದ ಸೇವೆಗೆ ಸಮರ್ಪಣೆಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

Officers Adda

- CBI ಅನ್ನು 1963 ರಲ್ಲಿ ಗೃಹ ವ್ಯವಹಾರಗಳ ಸಚಿವಾಲಯದ ನಿರ್ಣಯದ ಮೂಲಕ ಸ್ಥಾಪಿಸಲಾಯಿತು.

- ಇದರ ಸ್ಥಾಪನೆಗೆ ಸಂತಾನಂ ಭ್ರಷ್ಟಾಚಾರ ತಡೆ ಸಮಿತಿ ಶಿಫಾರಸು ಮಾಡಿದೆ

- ಸಿಬಿಐ ದೆಹಲಿ ವಿಶೇಷ ಪೊಲೀಸ್ ಸ್ಥಾಪನೆ (DSPE) ಕಾಯಿದೆ, 1946 ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ .

- ಇದು ಸಾಂವಿಧಾನಿಕ ಅಥವಾ ಶಾಸನಬದ್ಧ ಸಂಸ್ಥೆಯೂ ಅಲ್ಲ.

Officers Adda

# Interpol

Intergovernmental organization

The International Criminal Police Organization, commonly known as Interpol, is an international organization that facilitates worldwide police cooperation and crime control. It is the world's largest international police organization. Wikipedia

**Headquarters:** Lyon, France

**Founded:** 7 September 1923, Vienna, Austria

**President:** Ahmed Naser Al-Raisi

Officers Adda

# INPC

# IMPORTANT NEWS PAPER CUTTINGS

## INPC

### ಇಸ್ರೊ: ವೈಜ್ಞಾನಿಕ ಅನ್ವೇಷಣೆಗೆ ಸೀಮಿತವಾಗದ ಅಂತರಿಕ್ಷ ಕಾರ್ಯಕ್ರಮ

# 'ಚಂದ್ರನ ಬಾಹ್ಯಾಕಾಶ ಅಧ್ಯಯನಕ್ಕೆ ತಯಾರಿ'

ಪ್ರಜಾವಾಣಿ ವಾರ್ತೆ



'ಚಂದ್ರಯಾನ-3'ರ ಲ್ಯಾಂಡರ್‌ನಲ್ಲಿರುವ ಕ್ಯಾಮೆರಾ (ಎಲ್1) ಸೆರೆಹಿಡಿದಿರುವ ಭೂಮಿಯ ಚಿತ್ರ

–ಪಿಟಿಐ ಚಿತ್ರ

ಬೆಂಗಳೂರು: ವಿಶ್ವದ ಗಮನ ಸೆಳೆದಿರುವ ಅಂತರಿಕ್ಷ ಕಾರ್ಯಕ್ರಮ 'ಚಂದ್ರಯಾನ-3'ರ ನೌಕೆ ಚಂದ್ರನನ್ನು ಸಮೀಪಿಸುತ್ತಿರುವಂತೆಯೇ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಮತ್ತಷ್ಟು ಅಧ್ಯಯನ ಆರಂಭಿಸಿದೆ.

ಚಂದ್ರನ ವಾತಾವರಣ ಹಾಗೂ ಸುತ್ತಲಿನ ಬಾಹ್ಯಾಕಾಶದಲ್ಲಿನ ಸದ್ಯದ ಪರಿಸ್ಥಿತಿ ಕುರಿತು ಇಸ್ರೊ ಪರಿಶೀಲನೆ ನಡೆಸುತ್ತಿದೆ. ಅದರಲ್ಲೂ, ಮುಂದಿನ ಕೆಲ ವರ್ಷಗಳಲ್ಲಿ 'ಆರ್ಟೆಮಿಸ್' ಬಾಹ್ಯಾಕಾಶ ಕಾರ್ಯಕ್ರಮದಡಿ ಚಂದ್ರನ ಸುತ್ತಮುತ್ತ ಮತ್ತಷ್ಟು ಚಟುವಟಿಕೆಗಳು ಕಂಡುಬರುವ ಕಾರಣ ಈ ಪರಿಶೀಲನೆಗೆ ಮಹತ್ವ ಇದೆ ಎಂದು ಇಸ್ರೊ ಹೇಳಿದೆ.

'ಭವಿಷ್ಯದಲ್ಲಿನ ಬಾಹ್ಯಾಕಾಶ ಕಾರ್ಯಕ್ರಮಗಳು ವೈಜ್ಞಾನಿಕ ಅನ್ವೇಷಣೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ಅಂತರಿಕ್ಷ ಸಂಪನ್ಮೂಲವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳುವುದನ್ನು ಕೂಡ ಒಳಗೊಂಡಿರುತ್ತವೆ. ಈ ಕಾರಣಕ್ಕಾಗಿ, ಚಂದ್ರನ ಪರಿಸರ ಕುರಿತ ಹೆಚ್ಚಿನ ಅರಿವು ಗ್ರಹಗಳ ಕಕ್ಷೆಗಳಲ್ಲಿ ಎದುರಾಗಬಹುದಾದ ಅಪಾಯಗಳನ್ನು ಎದುರಿಸುವ ಕಾರ್ಯಾಚರಣೆ ರೂಪಿಸಲು ನೆರವಾಗುತ್ತದೆ' ಎಂದು ಇಸ್ರೊ ವಿಜ್ಞಾನಿಗಳು ಹೇಳಿದ್ದಾರೆ.

ಕಳೆದ ಜುಲೈಗೆ ಅಂತ್ಯಗೊಂಡ ಅವಧಿಯಲ್ಲಿ ಚಂದ್ರನ ಕಕ್ಷೆಯಲ್ಲಿ ಆರು ಗಗನನೌಕೆಗಳು ಪರಿಭ್ರಮಣ ಮಾಡುತ್ತಿವೆ. ನಾಸಾದ ನಾಲ್ಕು, ಇಸ್ರೊದ 'ಚಂದ್ರಯಾನ-2' ಕೊರಿಯಾದ ಗಗನನೌಕೆ 'ಕೆಪಿಎಲ್‌ಒ' ಕಕ್ಷೆಯಲ್ಲಿವೆ.

ಭಾರತದ 'ಚಂದ್ರಯಾನ-1' ಹಾಗೂ 2009ರಲ್ಲಿ ಜಪಾನ್ ಉಡ್ಡಯನ ಮಾಡಿದ್ದ 'ಔನಾ' ನೌಕೆ ಈಗ ನಿಷ್ಕ್ರಿಯಗೊಂಡಿದ್ದರೂ, ಕಕ್ಷೆಯಲ್ಲಿ ಪರಿಭ್ರಮಿಸುತ್ತಿವೆ.

ಇನ್ನು, ರಷ್ಯಾದ 'ಲೂನಾ-25' ನೌಕೆಯು ಆಗಸ್ಟ್ 16ರ ವೇಳೆಗೆ ಚಂದ್ರನಿಂದ 100 ಕಿ.ಮೀ. ದೂರದಲ್ಲಿರುವ ಕಕ್ಷೆಯನ್ನು ಪ್ರವೇಶಿಸುವ ನಿರೀಕ್ಷೆ ಇದ್ದು, ಆಗಸ್ಟ್ 21-23ರ ನಡುವೆ ಈ ನೌಕೆ ಕೂಡ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಯಲಿದೆ. 'ಚಂದ್ರಯಾನ-3'ರ ಸಾಫ್ಟ್‌ಲ್ಯಾಂಡಿಂಗ್ ಆಗಸ್ಟ್ 23ರಂದು ನಿಗದಿಯಾಗಿದೆ.



Officers Adda

# ಇಸ್ರೋ ವೈಜ್ಞಾನಿಕ ಅನ್ವೇಷಣೆಗೆ ಸೀಮಿತವಾಗದ ಅಂತರಿಕ್ಷ ಕಾರ್ಯಕ್ರಮ

- ಮುಂದಿನ ಕೆಲ ವರ್ಷಗಳಲ್ಲಿ ಆರ್ಟೆಮಿಸ್ ಬಾಹ್ಯಾಕಾಶ ಕಾರ್ಯಕ್ರಮದಡಿ ಚಂದ್ರನ ಸುತ್ತಮುತ್ತ ಮತ್ತಷ್ಟು ಚಟುವಟಿಕೆಗಳು ಕಂಡುಬರುವ ಕಾರಣ ಈ ಪರಿಶೀಲನೆಗೆ ಮಹತ್ವ ಇದೆ ಎಂದು ಇಸ್ರೋ ಹೇಳಿದೆ.

- ಕಳೆದ ಜುಲೈ ಅಂತ್ಯಗೊಂಡ ಅವಧಿಯಲ್ಲಿ ಚಂದ್ರನ ಕಕ್ಷೆಯಲ್ಲಿ ಆರು ಗಗನ ನೌಕೆಗಳು ಪರಿಭ್ರಮಣ ಮಾಡುತ್ತಿವೆ. ನಾಸಾದ ನಾಲ್ಕು ಇಸ್ರೋದ ಚಂದ್ರಯಾನ 2 ಕೋರಿಯಾದ ಗಗನ ನೌಕೆ ಕೆಪಿಎಲ್ ಓ ಕಕ್ಷೆ ಯಲ್ಲಿವೆ.

Officers Adda



- ಭಾರತದ ಚಂದ್ರಯಾನ –1 ಹಾಗೂ 2009ರಲ್ಲಿ ಜಪಾನ್ ಉಡ್ಡಯನ ಮಾಡಿದ್ದ ಜೌನಾ ನೌಕೆ ಈಗ ನಿಷ್ಕ್ರಿಯಗೊಂಡಿದ್ದರೂ, ಕಕ್ಷೆ ಯಲ್ಲಿ ಪರಿಭ್ರಮಿಸುತ್ತಿವೆ.

- ಇನ್ನು ರಷ್ಯಾದ ಲೂ ನಾ –25 ನೌಕೆಯು ಆಗಸ್ಟ್ 16ರ ವೇಳೆಗೆ ಚಂದ್ರನಿಂದ 100 ಕಿಲೋಮೀಟರ್ ದೂರದಲ್ಲಿರುವ ಕಕ್ಷೆ ಯನ್ನು ಪ್ರವೇಶಿಸುವ ನಿರೀಕ್ಷೆಯಿದ್ದು, ಆಗಸ್ಟ್ 21 –23 ರ ನಡುವೆ ಈ ನೌಕೆ ಕೂಡ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಯಲಿದೆ. ಚಂದ್ರ ಯಾನ –3 ರ ಸಾಫ್ಟ್ ಲ್ಯಾಂಡಿಂಗ್ ಆಗಸ್ಟ್ 23 ರಂದು ನಿಗದಿಯಾಗಿದೆ.

Officers Adda



# ಪರಮಾಣು ಇಂಧನ ಮಾರಾಟ: ರಷ್ಯಾಕ್ಕೆ ಆದಾಯ

ವಾಷಿಂಗ್ಟನ್ (ಎಪಿ): ಉಕ್ರೇನ್ ವಿರುದ್ಧದ ಸೇನಾ ಕಾರ್ಯಾಚರಣೆಗೆ ಪ್ರತಿಯಾಗಿ ಅಮೆರಿಕ ಮತ್ತು ಐರೋಪ್ಯ ಮಿತ್ರ ರಾಷ್ಟ್ರಗಳು ರಷ್ಯಾ ವಿರುದ್ಧ ಹಲವು ನಿರ್ಬಂಧಗಳನ್ನು ವಿಧಿಸಿವೆಯಾದರೂ, ಪರಮಾಣು ಇಂಧನ ಮತ್ತು ಉತ್ಪನ್ನಗಳನ್ನು ಭಾರಿ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿವೆ. ಪರಿಣಾಮವಾಗಿ ಯುದ್ಧ ಮುನ್ನಡೆಸಲು ಹಣದ ಕೊರತೆ ಎದುರಿಸುತ್ತಿರುವ ರಾಷ್ಟ್ರಕ್ಕೆ ನೂರಾರು ಮಿಲಿಯನ್ ಡಾಲರ್‌ಗಳ ಆದಾಯ ಪಾಶ್ಚಾತ್ಯ ರಾಷ್ಟ್ರಗಳಿಂದಲೇ ಲಭ್ಯವಾಗುತ್ತಿದೆ.




Officers Adda

- ಪರಮಾಣು ಇಂಧನ ಮಾರಾಟ ರಷ್ಯಾ ಕ್ಕೆ ಆದಾಯ

- ಪರಮಾಣು ಇಂಧನ ಮತ್ತು ಉತ್ಪನ್ನಗಳನ್ನು ಭಾರಿ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿವೆ. ಪರಿಣಾಮವಾಗಿ ಯುದ್ಧ ಮುನ್ನಡೆಸಲು ಹಣದ ಕೊರತೆ ಎದುರಿಸುತ್ತಿರುವ ರಾಷ್ಟ್ರಕ್ಕೆ ನೂರಾರು ಮಿಲಿಯನ್ ಡಾಲರ್ ಗಳ ಆದಾಯ ಪಾಶ್ಚಾ ತ್ಯ ರಾಷ್ಟ್ರಗಳಿಂದಲೇ ಲಭ್ಯವಾಗುತ್ತಿದೆ

Officers Adda





# ಆನೆಗಳ ಸಂಖ್ಯೆ: ರಾಜ್ಯವೇ ಪ್ರಥಮ

ಈ ಬಾರಿ ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳು ತಾವಾಗಿಯೇ ಆನೆಗಳ ಗಣತಿ ನಡೆಸಿವೆ. ಆಂಧ್ರಪ್ರದೇಶ ಹೊರತುಪಡಿಸಿ ಮೂರು ರಾಜ್ಯಗಳ ವರದಿಗಳು ಬಂದಿವೆ. ಕರ್ನಾಟಕ ದೇಶದಲ್ಲೇ ಅತ್ಯಧಿಕ ಆನೆಗಳನ್ನು ಹೊಂದಿರುವುದು ಗಣತಿಯಲ್ಲಿ ದೃಢಪಟ್ಟಿದೆ.

## ಆನೆಗಳ ಸಂಖ್ಯೆಯಲ್ಲಿ ನಿರಂತರ ಏರಿಕೆ




## ಗಣತಿಯಲ್ಲಿ ರಾಜ್ಯವಾರು ವಿವರ




**ಈ ವರ್ಷದ ಗಣತಿ**

**23** ವಿಭಾಗಗಳಲ್ಲಿ ಆನೆಗಳ ಪತ್ತೆ

**0.34** ಆನೆ ವಾಸ್ತವ್ಯದ ಸಾಂದ್ರತೆ

**6,395** ರಾಜ್ಯದಲ್ಲಿರುವ ಒಟ್ಟು ಆನೆಗಳು

ಪ್ರಜಾವಾಣಿ ಗ್ರಾಫಿಕ್



Officers Adda



# ಆನೆ ಸಂಖ್ಯೆಯಲ್ಲಿ ರಾಜ್ಯವೇ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ಮೇ ತಿಂಗಳಿನಲ್ಲಿ ನಡೆದ ಆನೆ ಗಣತಿಯಲ್ಲಿ ಕರ್ನಾಟಕದಲ್ಲಿ 6,395 ಆನೆಗಳಿರುವುದು ಕಂಡು ಬಂದಿದೆ. ಆನೆಗಳ ಸಂಖ್ಯೆಯಲ್ಲಿ ರಾಜ್ಯವು ದೇಶದಲ್ಲೇ ಅಗ್ರಸ್ಥಾನ ಪಡೆದಿದೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಆನೆ ಗಣತಿ ವರದಿಯ ಮುಖ್ಯಾಂಶಗಳನ್ನು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿ ಮಾತನಾಡಿದ ಅವರು, '2017ರಲ್ಲಿ ನಡೆದ ಗಣತಿ ಪ್ರಕಾರ, ರಾಜ್ಯದಲ್ಲಿ 6,049 ಆನೆಗಳಿದ್ದವು. ಆರು ವರ್ಷಗಳ ಬಳಿಕ ಕಳೆದ ಮೇ 17 ರಿಂದ 19ರವರೆಗೆ ಗಣತಿ ನಡೆಸಲಾಗಿದೆ. ರಾಜ್ಯದಲ್ಲಿ ಆನೆಗಳ ಸಂಖ್ಯೆಯಲ್ಲಿ 346ರಷ್ಟು ಹೆಚ್ಚಳವಾಗಿರುವುದು ಕಂಡುಬಂದಿದೆ' ಎಂದರು.

ರಾಜ್ಯದ 32 ವನ್ಯಜೀವಿ ವಿಭಾಗಗಳಲ್ಲಿ ನಡೆದ ಗಣತಿಯಲ್ಲಿ ಇಲಾಖೆಯ 3,400 ಸಿಬ್ಬಂದಿ ಪಾಲ್ಗೊಂಡಿದ್ದರು. 23 ವನ್ಯಜೀವಿ ವಿಭಾಗಗಳಲ್ಲಿ ಆನೆಗಳು ಇರುವುದು ದೃಢಪಟ್ಟಿದೆ. 6,104 ಚದರ ಕಿಲೋಮೀಟರ್ ಪ್ರದೇಶದಲ್ಲಿ ಆನೆ ಗಣತಿ ನಡೆಸಲಾಗಿದೆ. ಗಣತಿ ದಿನಗಳಲ್ಲಿ 2,219 ಆನೆಗಳನ್ನು ನೇರವಾಗಿ ಎಣಿಕೆ ಮಾಡಲಾಗಿತ್ತು ಎಂದು ವಿವರಿಸಿದರು.

ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಆನೆ ಗಣತಿ ನೇತೃತ್ವ ವಹಿಸಿದ್ದವು. ಆಂಧ್ರಪ್ರದೇಶದಲ್ಲೂ ಇದೇ ಅವಧಿಯಲ್ಲಿ ಗಣತಿ ನಡೆದಿದೆ. ಗಣತಿಯ ವಿನ್ಯಾಸ, ಸಿಬ್ಬಂದಿಗೆ ತರಬೇತಿ, ಫಲಿತಾಂಶಗಳ ವಿಶ್ಲೇಷಣೆ ಮತ್ತು ವರದಿ ತಯಾರಿಕೆಗೆ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಆರ್. ಸುಕುಮಾರ್ ನೇತೃತ್ವದ ತಂತ್ರಜ್ಞರ ತಂಡ ನೆರವು ನೀಡಿತ್ತು ಎಂದು ತಿಳಿಸಿದರು.

ಹುಲಿಗಳ ಸಂಖ್ಯೆಯಲ್ಲಿ ಕರ್ನಾಟಕವು ದೇಶದಲ್ಲೇ ಎರಡನೇ ಸ್ಥಾನದಲ್ಲಿರುವುದು ಇತ್ತೀಚೆಗೆ ಬಿಡುಗಡೆಯಾದ ಹುಲಿ ಗಣತಿ ವರದಿಯಿಂದ ಗೊತ್ತಾಗಿತ್ತು. ಈಗ ಆನೆಗಳ ಸಂಖ್ಯೆಯಲ್ಲಿ ರಾಜ್ಯಕ್ಕೆ ಅಗ್ರ ಸ್ಥಾನ ದೊರಕಿದೆ. 2010 ರಿಂದಲೂ ರಾಜ್ಯದಲ್ಲಿ ಆನೆಗಳ ಸಂಖ್ಯೆಯಲ್ಲಿ ನಿರಂತರ ಏರಿಕೆಯಾಗುತ್ತಿದೆ ಎಂದರು.

## ಆನೆಗಳು ಎಲ್ಲಿ? ಎಷ್ಟಿವೆ?

| ವನ್ಯಜೀವಿ ವಲಯ | ಆನೆಗಳ ಸಂಖ್ಯೆ |
|---|---|
| ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ | 1,116 |
| ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ | 831 |
| ಮಲೆಮಹದೇಶ್ವರ ಬೆಟ್ಟ ವನ್ಯಜೀವಿ ವಿಭಾಗ | 706 |
| ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ | 619 |
| ಭದ್ರಾ ಹುಲಿ ಸಂರಕ್ಷಿತ ಪ್ರದೇಶ | 445 |
| ಕಾವೇರಿ ವನ್ಯಜೀವಿ ವಿಭಾಗ | 236 |
| ಮಡಿಕೇರಿ ಪ್ರಾದೇಶಿಕ ವಿಭಾಗ | 214 |
| ಕೊಪ್ಪ ವಿಭಾಗ | 128 |
| ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ | 127 |
| ಶಿವಮೊಗ್ಗ ವನ್ಯಜೀವಿ ವಿಭಾಗ | 127 |
| ಮಡಿಕೇರಿ ವನ್ಯಜೀವಿ ವಿಭಾಗ | 113 |
| ಹಾಸನ ವಿಭಾಗ | 66 |
| ಮೈಸೂರು ಪ್ರಾದೇಶಿಕ ವಿಭಾಗ | 59 |
| ವಿರಾಜಪೇಟೆ ವಿಭಾಗ | 58 |
| ಮಂಗಳೂರು ವಿಭಾಗ | 47 |
| ಕಾಳಿ ಹುಲಿ ಸಂರಕ್ಷಿತ ಪ್ರದೇಶ | 38 |
| ರಾಮನಗರ ವಿಭಾಗ | 33 |
| ಚಿಕ್ಕಮಗಳೂರು ವಿಭಾಗ | 33 |
| ಕೋಲಾರ ವಿಭಾಗ | 13 |
| ಭದ್ರಾವತಿ ವಿಭಾಗ | 08 |
| ಕುದುರೆಮುಖ ವಿಭಾಗ | 05 |
| ಹಳಿಯಾಳ ವಿಭಾಗ | 03 |
| ಯಲ್ಲಾಪುರ ವಿಭಾಗ | 02 |

**ಸಂಘರ್ಷ ತಡೆಗೆ ಕ್ರಮ:** ಆನೆಗಳು ಜನವಸತಿ ಪ್ರದೇಶ ಪ್ರವೇಶದಿಂದ ಮಾನವ- ಪ್ರಾಣಿ ಸಂಘರ್ಷ ಉಂಟಾಗುವುದನ್ನು ತಪ್ಪಿಸಲು ಅರಣ್ಯ ಇಲಾಖೆ ಪ್ರಯತ್ನಿಸುತ್ತಿದೆ. ಅರಣ್ಯದ ಅಂಚಿನಲ್ಲಿ ರೈಲ್ವೆ ಹಳಿಯ ಕಂಬಿಗಳನ್ನು ಬಳಸಿ ಬೇಲಿ ನಿರ್ಮಿಸಲು ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ₹ 120 ಕೋಟಿ ಅನುದಾನ ಒದಗಿಸಲಾಗಿದೆ. ₹ 300 ಕೋಟಿ ಅನುದಾನದ ಬೇಡಿಕೆ ಇದ್ದು, ಹೆಚ್ಚಿನ ಮೊತ್ತದ ಮಂಜೂರಾತಿಗೆ ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು.

ಆನೆ ತಡೆಗೆ ರೈಲ್ವೆ ಕಂಬಿ ಬೇಲಿಯೂ ಸೇರಿದಂತೆ ವಿವಿಧ ಯೋಜನೆಗಳಿಗೆ ಕೇಂದ್ರ ಸರ್ಕಾರದ ನೆರವನ್ನು ಪಡೆಯುವುದಕ್ಕೂ ಪ್ರಯತ್ನಿಸಲಾಗುತ್ತಿದೆ. ಹುಲಿ ಯೋಜನೆಯ ಮೂರು ಮತ್ತು ನಾಲ್ಕನೇ ಕಂತುಗಳ ಅನುದಾನವೂ ಕೇಂದ್ರದಿಂದ ಬಿಡುಗಡೆಯಾಗಿಲ್ಲ. ಈ ಎಲ್ಲವನ್ನೂ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

### ಇದು ರಾಜ್ಯಗಳೇ ನಡೆಸಿದ ಗಣತಿ

ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದಿಂದ ಪ್ರತಿ ಐದು ವರ್ಷಗಳಿಗೊಮ್ಮೆ ಆನೆಗಳ ಗಣತಿ ನಡೆಸಲಾಗುತ್ತಿತ್ತು. 2022ರಲ್ಲಿ ಗಣತಿ ನಡೆಯಬೇಕಿತ್ತು. ಆದರೆ, ಕೇಂದ್ರ ಸರ್ಕಾರ ಗಣತಿ ನಡೆಸಲಿಲ್ಲ. ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಈ ವರ್ಷ ತಾವಾಗಿಯೇ ಆನೆಗಳ ಗಣತಿ ನಡೆಸಿವೆ. ಆಂಧ್ರಪ್ರದೇಶವೂ ಗಣತಿ ನಡೆಸಿದ್ದು, ಇನ್ನೂ ವರದಿ ಬಂದಿಲ್ಲ.



- ಆನೆಗಳ ಸಂಖ್ಯೆ ಕರ್ನಾಟಕ ರಾಜ್ಯವೇ ಪ್ರಥಮ

- ಕರ್ನಾಟಕ 6395
- ಅಸ್ಸಾಂ 5719
- ಕೇರಳ 1920
- ತಮಿಳುನಾಡು 2961

- 2023ರ ಮೇ ತಿಂಗಳಿನಲ್ಲಿ ಆನೆಗಣತಿ ನಡೆಯಿತು.

- ರಾಜ್ಯವು ದೇಶದಲ್ಲಿ ಅಗ್ರಸ್ಥಾನ ಪಡೆದಿದೆ

- 2017ರಲ್ಲಿ ನಡೆದ ಗಣತಿ ಪ್ರಕಾರ ರಾಜ್ಯದಲ್ಲಿ 6,049 ಆನೆಗಳಿದ್ದವು, ಆರು ವರ್ಷಗಳ ಬಳಿಕ ಕಳೆದ ಮೇ 17 ರಿಂದ 19 ರವರೆಗೆ ಗಣತಿ. ನಡೆಸಲಾಗಿದೆ.

Officers Adda



- ರಾಜ್ಯದ 32 ವನ್ಯಜೀವಿ ವಿಭಾಗಗಳಲ್ಲಿ ಗಣತಿ ನಡೆಸಲಾಗಿದೆ.
- 23 ವನ್ಯಜೀವಿ ವಿಭಾಗಗಳಲ್ಲಿ ಆನೆಗಳು ಇರುವುದು ದೃಢಪಟ್ಟಿದೆ
- ಕರ್ನಾಟಕ ಕೇರಳ ಮತ್ತು ತಮಿಳುನಾಡು ರಾಜ್ಯಗಳು ಆನೆಗಣತಿ ನೇತೃತ್ವ ವಹಿಸಿದ್ದವು.
- ಆಂಧ್ರಪ್ರದೇಶದಲ್ಲೂ ಇದೇ ಅವಧಿಯಲ್ಲಿ ಗಣತಿ ನಡೆದಿದೆ
- 2010 ರಿಂದಲೂ ರಾಜ್ಯದಲ್ಲಿ ಆನೆಗಳ ಸಂಖ್ಯೆಯಲ್ಲಿ ನಿರಂತರ ಏರಿಕೆಯಾಗುತ್ತಿದೆ.
- ಪ್ರತಿ ಐದು ವರ್ಷಗಳಿಗೊಮ್ಮೆ ಆನೆಗಳ ಗಣತಿ ನಡೆಸಲಾಗುತ್ತದೆ.

Officers Adda



- ಪ್ರಾಜೆಕ್ಟ್ ಎಲಿಫೆಂಟ್ ಎಂಬುದು ಭಾರತ ಸರ್ಕಾರದ ಯೋಜನೆಯಾಗಿದೆ
- ಪ್ರಾಜೆಕ್ಟ್ ಎಲಿಫೆಂಟ್ ಯೋಜನೆಯು ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ರೂಪಿಸಲಾಗಿದೆ
- ಭಾರತ ಸರ್ಕಾರವು 1992 ರಲ್ಲಿ ಆನೆ ಯೋಜನೆಯನ್ನು ಆರಂಭಿಸಿತು
- ಆನೆಗಳ ಸಂತತಿಯನ್ನು ರಕ್ಷಿಸುವುದು ಮತ್ತು ಅವುಗಳ ಆವಾಸ ಸ್ಥಾನಗಳನ್ನು ಬಲಪಡಿಸುವುದು ಇದರ ಉದ್ದೇಶ
- ಆನೆಗಳ ಕಾರಿಡಾರಗಳುನ್ನು ಸಂರಕ್ಷಿಸುವುದು ಇದರಲ್ಲಿದೆ
- ಆನೆ ಯೋಜನೆಯಲ್ಲಿ ಭಾರತ ಸರ್ಕಾರ ಎಲಿಫೆಂಟ್ ರಿಸರ್ವ್‌ಗಳನ್ನು ಸ್ಥಾಪಿಸುವ ಗುರಿ ಹೊಂದಿದೆ ಮತ್ತು ಸ್ಥಾಪಿಸಿದೆ
- ಭಾರತ ದೇಶದಲ್ಲಿ ಒಟ್ಟು 34 ಆನೆ ಸಂರಕ್ಷಿತ ಪ್ರದೇಶಗಳಿವೆ
- ಕರ್ನಾಟಕದಲ್ಲಿ ಪ್ರಮುಖವಾಗಿ ಎರಡು ಆನೆ ಸಂರಕ್ಷಿತ ಪ್ರದೇಶಗಳಿವೆ
- ಕರ್ನಾಟಕದ ಮೊದಲ ಆನೆ ಸಂರಕ್ಷಿತ ಪ್ರದೇಶ ಮೈಸೂರಿನ ಬ್ರಹ್ಮಗಿರಿ ನೀಲಗಿರಿ ಪರ್ವತಗಳಲ್ಲಿದೆ, ಇದನ್ನು 2002 ರಲ್ಲಿ ಸ್ಥಾಪನೆ ಮಾಡಲಾಗಿದೆ

Officers Adda



- ಕರ್ನಾಟಕದ ಎರಡನೇ ಆನೆ ಸಂರಕ್ಷಿತ ಪ್ರದೇಶ **ದಾಂಡೇಲಿ ಆನೆ ಸಂರಕ್ಷಿತ** ಪ್ರದೇಶ ಇದನ್ನು **2021** ರಲ್ಲಿ ಸ್ಥಾಪಿಸಲಾಗಿದೆ

- ಭಾರತ ದೇಶದಲ್ಲಿ **ಒಟ್ಟು 54 ಹುಲಿ ಸಂರಕ್ಷಿತ** ಪ್ರದೇಶಗಳಿವೆ

- ಆನೆಗಳ ಸಂರಕ್ಷಣೆಗೆ ಕೇಂದ್ರ ಸರ್ಕಾರವು ವನ್ಯಜೀವಿ **ಶಾಸ್ತ್ರಜ್ಞ ಡಾಕ್ಟರ್ ಮಹೇಶ್ ರಂಗರಾಜನ ನೇತೃತ್ವದಲ್ಲಿ 2010ರಲ್ಲಿ** ಆನೆಯ ಕಾರ್ಯಪಡೆಯನ್ನ ಸ್ಥಾಪಿಸಿತು

- ಈ ಕಾರ್ಯ ಪಡೆಯು ರಾಷ್ಟ್ರೀಯ ಆನೆಯ ಸಂರಕ್ಷಣಾ ಪ್ರಾಧಿಕಾರವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿದೆ ಹಾಗೂ ದೇಶಾದ್ಯಂತ **ಸುಮಾರು 88 ಆನೆ** ಕಾರಿಡಾರ್ ಗಳನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿದೆ

Officers Adda



- ಭಾರತದಲ್ಲಿ ಏಷ್ಯನ್ ಆನೆಗಳು ಹೆಚ್ಚಾಗಿ ಕಂಡುಬರುತ್ತವೆ
- ಆನೆಯೂ ಅತಿ ದೊಡ್ಡ ಸಸ್ಯಹಾರಿ ಪ್ರಾಣಿಯಾಗಿದೆ
- IUCN ಪ್ರಕಾರ ಇದು ಅಳಿವಿನಂಚಿನಲ್ಲಿರುವ ಪ್ರಭೇದವಾಗಿದೆ
- ವಿಶ್ವ ಆನೆ ದಿನವನ್ನು ಆಗಸ್ಟ್ 12ರಂದು ಆಚರಣೆ ಮಾಡಲಾಗುತ್ತದೆ
- 2010ರಲ್ಲಿ ಆನೆಯನ್ನು ಭಾರತದ ರಾಷ್ಟ್ರೀಯ ಪಾರಂಪರಿಕ ಪ್ರಾಣಿ ಎಂದು ಗುರುತಿಸಲಾಗಿದೆ
- ಕರ್ನಾಟಕ, ಜಾರ್ಖಂಡ್ ಹಾಗೂ ಕೇರಳ ರಾಜ್ಯಗಳು ಆನೆಯನ್ನು ರಾಜ್ಯ ಪ್ರಾಣಿಯನ್ನಾಗಿ ಹೊಂದಿವೆ
- ಆನೆಗಳ ರಕ್ಷಣೆಗಾಗಿ ಭಾರತ ಸರ್ಕಾರ" ಹಾಥಿ ಮೇರೆ ಸಾಥಿ" ಎಂಬ ಅಭಿಯಾನವನ್ನು ಕೈಗೊಂಡಿತ್ತು

Officers Adda



- **CITES** ಸಂಸ್ಥೆಯು ಮೈಕ್ ಎಂಬ ಯೋಜನೆಯನ್ನು ಆನೆಗಳನ್ನು ರಕ್ಷಿಸಲು ಜಾರಿಗೊಳಿಸಿದೆ

- **MIKE …the sides monitoring the illegal killing of elephants**

- **Totally there are 10 MIKE sites in India**

- ಈ ಮೈಕ್ ಪ್ರದೇಶಗಳಲ್ಲಿ ಕರ್ನಾಟಕದ ಮೈಸೂರು ಆನೆ ಸಂರಕ್ಷಣಾ ಪ್ರದೇಶವು ಸೇರಿದೆ

OfficersAdda



# ಸಂಸದರ ನಿಧಿ: ಜಾಧವ್ ಶೂನ್ಯ ಶಿಫಾರಸು

• ಮಂಜುನಾಥ ಹೆಬ್ಬಾರ್

ನವದೆಹಲಿ: 2019ರ ಲೋಕಸಭಾ ಚುನಾವಣೆಯಲ್ಲಿ ಕಲಬುರಗಿ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಲಿಸುವ ಮೂಲಕ ದೇಶದ ಗಮನ ಸೆಳೆದಿದ್ದ ಡಾ.ಉಮೇಶ್ ಜಿ.ಜಾಧವ್ ಅವರು ಸಂಸದರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಯೋಜನೆಯಡಿ (ಎಂಪಿ ಲ್ಯಾಡ್) ಕಾಮಗಾರಿಗಳಿಗೆ ಅನುದಾನ ಬಳಸಲು ಕಳೆದ ಮೂರು ವರ್ಷಗಳಲ್ಲಿ ಯಾವುದೇ ಶಿಫಾರಸು ಮಾಡಿಲ್ಲ.

'ದೇಶದಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ಸಂಸದರು ಸಂಸದರ ನಿಧಿಗಳನ್ನು ಬಳಸಿಲ್ಲ. ಈ ಬಗ್ಗೆ ವಿವರಗಳನ್ನು ನೀಡಬೇಕು' ಎಂದು ಸಂಸದ ಥಾಮಸ್ ಚಾಯಿಕಡನ್ ಅವರು ಲೋಕಸಭೆಯಲ್ಲಿ ಬುಧವಾರ ಪ್ರಶ್ನೆ ಕೇಳಿದ್ದರು. ಇದಕ್ಕೆ ಕೇಂದ್ರ ಯೋಜನೆ ಹಾಗೂ ಕಾರ್ಯಕ್ರಮ ಅನುಷ್ಠಾನ ಸಚಿವ ರಾವ್ ಇಂದ್ರಜಿತ್ ಸಿಂಗ್ 65 ಪುಟಗಳ ಉತ್ತರ ನೀಡಿದ್ದಾರೆ. ಈ ಉತ್ತರದ ಪ್ರಕಾರ, ಉಮೇಶ್ ಜಾಧವ್, ಕೇಂದ್ರ ಸಚಿವ ಆರ್.ಕೆ.ಸಿಂಗ್, ಲಕ್ಷದ್ವೀಪದ ಎನ್‌ಸಿಪಿ ಸಂಸದ ಫೈಸಲ್ ಪಿ.ಪಿ. ಮೊಹಮ್ಮದ್ ಹಾಗೂ ಜಾರ್ಖಂಡ್‌ನ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ಸಂಸದರ ನಿಧಿಯಡಿ ಕಾಮಗಾರಿ ಗಳನ್ನು ನಡೆಸಲು ಕಳೆದ ಮೂರು ವರ್ಷಗಳಲ್ಲಿ ಯಾವುದೇ ಶಿಫಾರಸುಗಳನ್ನು ಮಾಡಿಲ್ಲ. ಕೇಂದ್ರ ಸಚಿವೆ ಅನ್ನಪೂರ್ಣಾದೇವಿ ಸೇರಿದಂತೆ ಆರು ಸಂಸದರು ಎರಡು ವರ್ಷಗಳಲ್ಲಿ ಯಾವುದೇ ಅನುದಾನ ಬಳಸಿಲ್ಲ. ಎಂಪಿಲ್ಯಾಡ್ಸ್ ಪೋರ್ಟಲ್‌ನಲ್ಲಿ ಜಿಲ್ಲಾ ಅಧಿಕಾರಿಗಳು ಅಪ್‌ಲೋಡ್ ಮಾಡಿರುವ ಮಾಹಿತಿ ಪ್ರಕಾರ ಈ ವಿವರ ಒದಗಿಸಲಾಗಿದೆ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

'ಸಂಸದರಿಗೆ ವಾರ್ಷಿಕ ₹5 ಕೋಟಿ ಗಳಂತೆ ಐದು ವರ್ಷಗಳಲ್ಲಿ ₹25 ಕೋಟಿ ಅನುದಾನ ನೀಡಲಾಗುತ್ತದೆ. ಸಂಸದರ ಶಿಫಾರಸಿನ ಆಧಾರದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಸಂಸದರು ಪ್ರಗತಿ ಪರಿಶೀಲನೆ ಸಭೆ ನಡೆಸಿ ಕಾಮಗಾರಿಗಳ ಪ್ರಗತಿಯ ವಿವರ ಪಡೆಯುತ್ತಾರೆ. ಒಂದು ವೇಳೆ, ಮೊದಲ ವರ್ಷ ಅನುದಾನ ಬಳಸದಿದ್ದರೆ ಮುಂದಿನ ವರ್ಷ ಅದನ್ನು ಬಳಸಲು ಅವಕಾಶ ಇದೆ. ಕೇಂದ್ರ ಸರ್ಕಾರ ಮೊದಲ ಹಂತದಲ್ಲಿ ₹2.5 ಕೋಟಿ ಅನುದಾನ ಬಿಡುಗಡೆ ಮಾಡುತ್ತದೆ. ಈ ಅನುದಾನದ ಬಳಕೆಯ ಪ್ರಮಾಣಪತ್ರ ನೀಡಿದ ಬಳಿಕ ₹2.5 ಕೋಟಿ ಅನುದಾನ ಬಿಡುಗಡೆಯಾಗುತ್ತದೆ ಎಂದು ರಾಜ್ಯದ ಹಿರಿಯ ಸಂಸದರೊಬ್ಬರು ಮಾಹಿತಿ ನೀಡಿದರು.

ಪೂರ್ಣ ಪ್ರಮಾಣದಲ್ಲಿ ಅನುದಾನ ಬಳಕೆಗೆ ಶಿಫಾರಸು ಮಾಡದವರ ಪಟ್ಟಿಯಲ್ಲಿ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ಎ.ನಾರಾಯಣಸ್ವಾಮಿ, ಬಿಜೆಪಿಯ ಸಂಸದರಾದ ಪಿ.ಸಿ.ಮೋಹನ್, ಎಸ್.ಮುನಿಸ್ವಾಮಿ, ವೈ.ದೇವೇಂದ್ರಪ್ಪ, ಮತ್ತಿತರರು ಸೇರಿದ್ದಾರೆ. ಇನ್ನೊಂದೆಡೆ, ಸಂಸದರ ನಿಧಿಯಲ್ಲಿ ಶಿವಮೊಗ್ಗ ಕ್ಷೇತ್ರಕ್ಕೆ 3 ವರ್ಷಗಳಲ್ಲಿ ₹17 ಕೋಟಿ ಮಂಜೂರು ಆಗಿದ್ದರೆ, ಸಂಸದ ಬಿ.ವೈ. ರಾಘವೇಂದ್ರ ₹32.14 ಕೋಟಿಯ ಕಾಮಗಾರಿಗಳ ಶಿಫಾರಸು ಮಾಡಿದ್ದಾರೆ.

ಕಲಬುರಗಿ ಕ್ಷೇತ್ರಕ್ಕೆ ಮೊದಲ ಹಂತದಲ್ಲಿ ₹2.5 ಕೋಟಿ ಅನುದಾನ ಬಿಡುಗಡೆ ಮಾಡಲಾಗಿತ್ತು. ಆದರೆ ಕಾಮಗಾರಿಯ ಲೆಕ್ಕಪರಿಶೋಧನೆ ಆಗಿರಲಿಲ್ಲ. ಹಾಗಾಗಿ, ಶೂನ್ಯ ಶಿಫಾರಸು ಎಂದು ತೋರಿಸುತ್ತಿದೆ. ನಾವು ಶೇ 90ರಷ್ಟು ನಿಯಮ ಪಾಲನೆ ಮಾಡಿದ್ದೇವೆ. ಕ್ಷೇತ್ರದ ಕಾಮಗಾರಿಗಳಿಗೆ ಅನುದಾನ ಬಳಕೆ ಮಾಡಿದ್ದೇವೆ. ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ಆಗಿವೆ.

**ಡಾ.ಉಮೇಶ್ ಜಿ.ಜಾಧವ್**, ಸಂಸದ

ಸಂಸದರಿಗೆ ಐದು ವರ್ಷಗಳಲ್ಲಿ ಸಿಗುವ ಅನುದಾನ ₹25 ಕೋಟಿ. ಕ್ಷೇತ್ರದ ಸಮಸ್ಯೆಗಳಿಗೆ ಹೋಲಿಸಿದರೆ ಈ ಅನುದಾನ ಏನೇನೂ ಸಾಲದು. ಸಮಸ್ಯೆಗಳು ಬೆಟ್ಟದಷ್ಟು ಇರುತ್ತವೆ. ಜನರ ಬೇಡಿಕೆಯೂ ದೊಡ್ಡ ಪ್ರಮಾಣದಲ್ಲಿ ಇರುತ್ತದೆ. ಅದನ್ನೇ ಬಳಸಿಲ್ಲ ಎಂದರೆ ಅವರಿಗೆ ಕ್ಷೇತ್ರದ ಬಗ್ಗೆ ಆಸಕ್ತಿ ಹಾಗೂ ಜನರ ಬಗ್ಗೆ ಕಾಳಜಿ ಇಲ್ಲ ಎಂದು ಅರ್ಥ.

**ಬಿ.ಎನ್.ಚಂದ್ರಪ್ಪ**, ಮಾಜಿ ಸಂಸದ, ಚಿತ್ರದುರ್ಗ

ರಾಜ್ಯದ ಸಂಸದರ ಸಾಧನೆ 06



- MPLADS
- MEMBERS OF PARLIAMENT LOCAL AREA DEVELOPMENT SCHEME

- ಸಂಸದರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ

- ಜಾರಿಗೆ ಬಂದಿದ್ದು 1993ರಲ್ಲಿ

- ತಮ್ಮ ಕ್ಷೇತ್ರದ ಜನರಿಗೆ ಕುಡಿಯುವ ನೀರಿನ ಯೋಜನೆ, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಆರೋಗ್ಯ, ನೈರ್ಮಲ್ಯ, ರಸ್ತೆ ಮುಂತಾದವುಗಳ ಅಭಿವೃದ್ಧಿಗೆ ಯೋಜನೆ ರೂಪಿಸುವುದು.

- ಯೋಜನೆಯನ್ನು P.V ನರಸಿಂಹರಾವ್ ಅವರ ನೇತೃತ್ವದ ಸರ್ಕಾರ ಜಾರಿಗೊಳಿಸಿತು

- ಮೊದಲು ಈ ಯೋಜನೆ ಅಡಿಯಲ್ಲಿ ಪ್ರತಿಯೊಬ್ಬ ಸಂಸದರಿಗೆ 5 ಲಕ್ಷ ರೂಪಾಯಿ ನೀಡಲಾಗುತ್ತಿತ್ತು ನಂತರ ಅದನ್ನು ಎರಡು ಕೋಟಿಗೆ ಏರಿಸಲಾಯಿತು.

Officers Adda



- ಈ ಯೋಜನೆಯಲ್ಲಿ ಪ್ರತಿಯೊಬ್ಬ ಸಂಸದರಿಗೂ **ಪ್ರತಿ ವರ್ಷ 5 ಕೋಟಿ ರೂಪಾಯಿಯಂತೆ ಐದು ವರ್ಷಗಳವರೆಗೆ ಒಟ್ಟು 25 ಕೋಟಿ** ರೂಪಾಯಿಗಳನ್ನು ನೀಡಲಾಗುತ್ತದೆ.

- ಈ ಯೋಜನೆಯ ಹಣವನ್ನು ಸ್ವಚ್ಛ ಭಾರತ ಅಭಿಯಾನ , ಸಂಸದರ ಆದರ್ಶ ಗ್ರಾಮ ಯೋಜನೆ ಮುಂತಾದ ಯೋಜನೆಗಳಿಗೂ ಬಳಸಬಹುದು.

- ಯೋಜನೆಯ ಅನುಷ್ಠಾನಕ್ಕೆ ಹಣಕಾಸಿನ ನೆರವನ್ನು ನೀಡುವುದು **ಅಂಕಿ ಸಂಖ್ಯೆಗಳು ಹಾಗೂ ಯೋಜನಾ ಅನುಷ್ಠಾನ ಸಚಿವಾಲಯ** ಭಾರತ ಸರ್ಕಾರ

Officers Adda





ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಅಶೋಕ, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಗೆ ಪುಟ್ಟರಂಗಶೆಟ್ಟಿ ಅಧ್ಯಕ್ಷ

# ವಿಧಾನಸಭೆ ಸ್ಥಾಯಿ ಸಮಿತಿಗಳಿಗೆ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023-24ನೇ ಸಾಲಿನ ವಿಧಾನ ಮಂಡಲದ ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿದೆ.

**ಸಾರ್ವಜನಿಕ ಲೆಕ್ಕಪತ್ರ ಸಮಿತಿ:** ವಿಧಾನಸಭೆ ಸದಸ್ಯರು- ಆರ್. ಅಶೋಕ (ಅಧ್ಯಕ್ಷ), ಆರ್.ವಿ. ದೇಶಪಾಂಡೆ, ಎಸ್.ವೈ. ಗೋಪಾಲಕೃಷ್ಣ, ಬಸವರಾಜ ರಾಯರಡ್ಡಿ, ಎಚ್.ವೈ. ಮೇಟಿ, ಎಚ್.ಸಿ. ಬಾಲಕೃಷ್ಣ, ಎಸ್. ಆರ್. ಶ್ರೀನಿವಾಸ (ವಾಸು), ಲಕ್ಷ್ಮಣ ಸವದಿ, ಜಿ.ಟಿ. ದೇವೇಗೌಡ, ಎನ್.ಎ. ಹ್ಯಾರಿಸ್, ಸಿ.ಸಿ. ಪಾಟೀಲ, ಎಸ್.ಆರ್. ವಿಶ್ವನಾಥ, ವಿ. ಸುನೀಲ್‌ಕುಮಾರ, ರಿಜ್ವಾನ್ ಅರ್ಷದ್, ರಾಘವೇಂದ್ರ ಹಿಟ್ನಾಳ. ವಿಧಾನ ಪರಿಷತ್ ಸದಸ್ಯರು- ಜಗದೀಶ ಶೆಟ್ಟರ್, ಬಿ.ಕೆ. ಹರಿಪ್ರಸಾದ್, ಶಶೀಲ್ ನಮೋಶಿ, ಶರವಣ, ಪ್ರತಾಪಸಿಂಹ ನಾಯಕ.

**ಸಾರ್ವಜನಿಕ ಉದ್ದಿಮೆಗಳ ಸಮಿತಿ:** ವಿಧಾನಸಭೆ ಸದಸ್ಯರು- ತನ್ವೀರ್ ಸೇಠ್ (ಅಧ್ಯಕ್ಷ), ಬಸನಗೌಡ ಪಾಟೀಲ ಯತ್ನಾಳ, ಜಿ.ಕೆ. ವೆಂಕಟಶಿವಾರೆಡ್ಡಿ, ಸಿ.ಎನ್. ಅಶ್ವತ್ಥನಾರಾಯಣ, ಎಂ. ಸತೀಶ್ ರೆಡ್ಡಿ, ಯು.ಬಿ. ಬಣಕಾರ್, ಡಾ. ಅಜಯ್ ಸಿಂಗ್, ಡಿ.ಜಿ. ಶಾಂತನಗೌಡ, ಎ.ಆರ್. ಕೃಷ್ಣಮೂರ್ತಿ, ಎ.ಬಿ. ರಮೇಶ ಬಂಡಿಸಿದ್ದೇಗೌಡ, ವಿನಯ್ ಕುಲಕರ್ಣಿ, ಬಿ.ಎ. ಬಸವರಾಜ, ವಿಜಯಾನಂದ ಕಾಶಪ್ಪನವರ್, ಟಿ.ಡಿ. ರಾಜೇಗೌಡ, ಜಿ. ಜನಾರ್ದನ ರೆಡ್ಡಿ, ವಿಧಾನ ಪರಿಷತ್ ಸದಸ್ಯರು- ಪ್ರಕಾಶ್ ಹುಕ್ಕೇರಿ, ಎಸ್. ರವಿ, ಹನುಮಂತ ನಿರಾಣಿ, ಸಿ.ಎನ್. ಮಂಜೇಗೌಡ, ಛಲವಾದಿ ನಾರಾಯಣಸ್ವಾಮಿ

**ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ:** ವಿಧಾನಸಭೆ ಸದಸ್ಯರು- ಪಿ.ಎಂ. ನರೇಂದ್ರಸ್ವಾಮಿ (ಅಧ್ಯಕ್ಷ), ಬಿ.ಜಿ. ಗೋವಿಂದಪ್ಪ, ಐಹೊಳೆ ದುರ್ಯೋಧನ ಮಹಾಲಿಂಗಪ್ಪ, ಅಬ್ಬಯ್ಯ ಪ್ರಸಾದ, ಎಸ್.ಎನ್. ನಾರಾಯಣಸ್ವಾಮಿ, ಮಾನಪ್ಪ ಡಿ. ವಜ್ಜಲ, ಬಸನಗೌಡ ದದ್ದಲ, ಅನಿಲ್ ಚಿಕ್ಕಮಾದು, ಬಸವರಾಜ್ ಮತ್ತಿಮೂಡ್, ಎನ್. ಶ್ರೀನಿವಾಸಯ್ಯ, ಕೆ.ಸಿ. ವೀರೇಂದ್ರ ಪಪ್ಪಿ, ಪ್ರಕಾಶ ಕೋಳಿವಾಡ, ಕೃಷ್ಣ ನಾಯಕ, ಸಿಮೆಂಟ್ ಮಂಜು, ಕರೆಮ್ಮ ವಿಧಾನ ಪರಿಷತ್- ಕೋಟ ಶ್ರೀನಿವಾಸ ಪೂಜಾರಿ, ಅರವಿಂದ್ ಕುಮಾರ್ ಅರಳಿ, ಶಾಂತಾರಾಮ್ ಬುಡ್ನ ಸಿದ್ದಿ, ರಾಜೇಂದ್ರ ರಾಜಣ್ಣ, ವೈ.ಎಂ. ಸತೀಶ್.

**ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ:** ವಿಧಾನಸಭೆ ಸದಸ್ಯರು- ಸಿ. ಪುಟ್ಟರಂಗಶೆಟ್ಟಿ (ಅಧ್ಯಕ್ಷ), ರಮೇಶ ಜಾರಕಿಹೊಳಿ, ಎಚ್.ಆರ್. ಗವಿಯಪ್ಪ, ಹರೀಶ್ ಪೂಂಜಾ, ಎಚ್.ಎ. ಇಕ್ಬಾಲ್ ಹುಸೇನ್, ಭೀಮಣ್ಣ ಟಿ. ನಾಯಕ, ಬಸವರಾಜು ಶಿವಗಂಗಾ, ಕೆ. ಹರೀಶ್ ಗೌಡ, ರವಿಶಂಕರ್ ಡಿ., ಆಸೀಫ್ (ರಾಜು) ಸೇಠ್, ಬಿ.ಬಿ. ಚಿಮ್ಮನಕಟ್ಟಿ, ಚನ್ನಬಸಪ್ಪ (ಚನ್ನಿ), ಎಚ್.ಕೆ. ಸುರೇಶ್ (ಹುಲ್ಲಳ್ಳಿ ಸುರೇಶ್), ಧೀರಜ್ ಮುನಿರಾಜು, ಶರಣಗೌಡ ಕಂದಕೂರ, ವಿಧಾನ ಪರಿಷತ್ತಿನ ಸದಸ್ಯರು- ವೈ.ಎ. ನಾರಾಯಣಸ್ವಾಮಿ, ಕೆ. ಅಬ್ದುಲ್ ಜಬ್ಬಾರ್, ಗಣಪತಿ ದುಮ್ಮಾ ಉಳ್ವೇಕರ್, ಎಸ್.ಎಸ್. ಗೋಪಿನಾಥ್, ಕೇಶವ ಪ್ರಸಾದ್ ಎಸ್.

**ಹಕ್ಕು ಬಾಧ್ಯತೆಗಳ ಸಮಿತಿ:** ವಿಧಾನಸಭೆಯ ಸದಸ್ಯರು- ಬಿ.ಆರ್. ಪಾಟೀಲ (ಅಧ್ಯಕ್ಷ), ತನ್ವೀರ್ ಸೇಠ್, ಎನ್.ಎ. ಹ್ಯಾರಿಸ್, ಅಜಯ್ ಧರ್ಮಸಿಂಗ್, ಎ.ಆರ್.ಕೃಷ್ಣಮೂರ್ತಿ, ಅರವಿಂದ ಬೆಲ್ಲದ, ಕೆ.ಗೋಪಾಲಯ್ಯ, ಕೆ.ವೈ. ನಂಜೇಗೌಡ, ಭರತ್ ಶೆಟ್ಟಿ ವೈ., ಡಿ.ವೇದವ್ಯಾಸ ಕಾಮತ್, ಎಚ್.ಡಿ ಮಂಜು.

**ಖಾಸಗಿ ಸದಸ್ಯರ ಮಸೂದೆ ಮತ್ತು ನಿರ್ಣಯಗಳ ಸಮಿತಿ:** ವಿಧಾನಸಭೆಯ ಸದಸ್ಯರು- ರುದ್ರಪ್ಪ ಮಾನಪ್ಪ ಲಮಾಣಿ(ಅಧ್ಯಕ್ಷ), ಅಪ್ಪಾಜಿ ನಾಡಗೌಡ, ಶಿವಾನಂದ ಕೌಜಲಗಿ, ಎಲ್.ಎ.ರವಿಸುಬ್ರಹ್ಮಣ್ಯ, ಎಂ.ಟಿ.ಕೃಷ್ಣಪ್ಪ, ರಿಜ್ವಾನ್ ಅರ್ಷದ್, ಶಶಿಕಲಾ ಜೊಲ್ಲೆ, ಶರತ್ ಬಚ್ಚೇಗೌಡ, ಎಂ.ರೂಪಕಲಾ, ಉದಯ ಗರುಡಾಚಾರ್, ಎ.ಸಿ.ಶ್ರೀನಿವಾಸ.

**ಅರ್ಜಿಗಳ ಸಮಿತಿ:** ವಿಧಾನಸಭೆಯ ಸದಸ್ಯರು- ರುದ್ರಪ್ಪ ಮಾನಪ್ಪ ಲಮಾಣಿ (ಅಧ್ಯಕ್ಷ), ಎಸ್. ಸುರೇಶ್ ಕುಮಾರ್, ಈ.ತುಕಾರಾಮ್, ಎ.ಮಂಜು, ಸಿ.ಬಿ.ಸುರೇಶ್ ಬಾಬು, ಬಿ.ಶಿವಣ್ಣ, ಎಸ್.ಟಿ.ಸೋಮಶೇಖರ್, ಅರಬೈಲ್ ಶಿವರಾಂ ಹೆಬ್ಬಾರ್, ಎಚ್.ಡಿ.ರಂಗನಾಥ್, ಉಮಾನಾಥ್ ಕೋಟ್ಯಾನ್, ಮಂತರ್‌ಗೌಡ, ಎಚ್.ಡಿ.ತಮ್ಮಯ್ಯ, ಪ್ರದೀಶ್ ಈಶ್ವರ್, ಎ.ಸಿ.ಶ್ರೀನಿವಾಸ್, ಆನಂದ್ ಕೆ.ಎಸ್, ಮಹೇಂದ್ರ ಕಲ್ಲಪ್ಪ ತಮ್ಮಣ್ಣನವರ.

**ವಸತಿ ಸೌಕರ್ಯ ಸಮಿತಿ:** ವಿಧಾನಸಭೆಯ ಸದಸ್ಯರು- ರುದ್ರಪ್ಪ ಮಾನಪ್ಪ ಲಮಾಣಿ (ಅಧ್ಯಕ್ಷ), ಶಿವರಾಜ್ ಪಾಟೀಲ, ಸತೀಶ್ ಕೃಷ್ಣ ಸೈಲ್, ಶರಣು ಸಲಗರ, ರವಿಶಂಕರ್ ಡಿ. ವೆಂಕಟೇಶ ಎಚ್.ವಿ. ವಿಶ್ವಾಸ್ ವಸಂತ್ ವೈದ್ಯ, ಜಗದೀಶ ಶಿವಯ್ಯ ಗುಡಗುಂಟಿ, ಸಿದ್ದುಪಾಟೀಲ, ಯಶಪಾಲ್ ಸುವರ್ಣ, ಮಹೇಶ್ ಟೆಂಗಿನಕಾಯಿ, ಸ್ವರೂಪ್ ಪ್ರಕಾಶ್, ಬಿ.ಎನ್.ರವಿಕುಮಾರ್



- ಸಾರ್ವಜನಿಕ ಲೆಕ್ಕಪತ್ರ, ಸಮಿತಿ
- ವಿಧಾನಸಭೆ ಸ್ಥಾಯಿ ಸಮಿತಿ ಗಳಿಗೆ ನೇಮಕ
- ಸಾರ್ವಜನಿಕ ಲೆಕ್ಕಪತ್ರ ಸಮಿತಿ
- ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ
- ಹಿಂದುಳಿದ ವರ್ಗಗಳ ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ
- ಹಕ್ಕು ಬಾಧ್ಯತೆಗಳ ಸಮಿತಿ
- ಖಾಸಗಿ ಸದಸ್ಯರ ಮಸೂದೆ ಮತ್ತು ನಿರ್ಣಯಗಳ ಸಮಿತಿ
- ವಸತಿ ಸೌಕರ್ಯ ಸಮಿತಿ

Officers Adda



# ONE LINERS

Officers Adda

- ಇತ್ತೀಚಿಗೆ 2023ರ ಲಿಂಗ ಸಾಮಾಜಿಕ ನಿಯಮಗಳ ಸೂಚ್ಯಂಕವನ್ನು (GSNI) ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ--> UNDP - United Nations Development Programme--> GSNI - Gender Social Norms Index ಸಂಸ್ಥೆ ಬಿಡುಗಡೆ ಮಾಡಿದೆ.

- ಇತ್ತೀಚಿಗೆ ಫ್ರಾನ್ಸ್ ದೇಶದಲ್ಲಿ ನಡೆದ ಅನೆಸಿ ಇಂಟರ್ನ್ಯಾಷನಲ್ ಅನಿಮೇಷನ್ ಫೆಸ್ಟಿವಲ್ (AIFF) ನಲ್ಲಿ ಭಾರತವು ಮೊದಲ ಬಾರಿಗೆ ಭಾಗವಹಿಸಿದೆ
- --> Annecy International Animation Festival (AIFF)

- ಇತ್ತೀಚಿಗೆ "ರೋಹಿಣಿ ಆಯೋಗ"(Rohini Commission) ದ ಮುಖ್ಯ ಉದ್ದೇಶ
- OBC ಗಳಲ್ಲಿ ಉಪ–ವರ್ಗೀಕರಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರೀಕ್ಷಿಸವುದು ಆಗಿದೆ.

Officers Adda

- ಇತ್ತೀಚಿಗೆ ಕೇಂದ್ರ ಕೃಷಿ ಸಚಿವಾಲಯವು ಪ್ರಾರಂಭಿಸಿರುವ DCS ಡಿಜಿಟಲ್ ಬೆಳೆ ಸಮೀಕ್ಷೆ (Digital Crop Survey) ಎಂಬುದಾಗಿದೆ.

- ಇತ್ತೀಚಿಗೆ ಪ್ರಾರಂಭಿಸಿದ ಸೂಕ್ಷ್ಮಜೀವಿಯ ವೈವಿಧ್ಯಮಯ ಸಂಸ್ಕೃತಿಯ ಸಂಗ್ರಹ ಕೇಂದ್ರ ಚಂಡೀಗಢ ಲ್ಲಿದೆ.

- ಪರಿಸರ ಸಂರಕ್ಷಣೆಗಾಗಿ Greenpeace India ಅಂತಾರಾಷ್ಟ್ರೀಯ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ.

Officers Adda

- ಜುಲೈ,1950 ರಲ್ಲಿ,'ಹೆಚ್ಚು ಮರಗಳನ್ನು ಬೆಳೆಸಿ' ಅಭಿಯಾನವನ್ನು ಕೆ.ಎಂ.ಮುನ್ಷಿ
- ಉದ್ಘಾಟಿಸಿದರು.

- ವಿಶ್ವ ಬ್ಯಾಂಕ್ ದಕ್ಷಿಣ ಏಷ್ಯಾದಲ್ಲಿ ಮೊದಲ ರಸ್ತೆ ಸುರಕ್ಷತೆ ಯೋಜನೆಯನ್ನು ಬಾಂಗ್ಲಾದೇಶ ಪ್ರಾರಂಭಿಸಿದೆ.

Officers Adda

- ಇತ್ತೀಚೆಗೆ ಸುದ್ದಿಯಲ್ಲಿದ್ದ "Nutri Garden Project" ಲಕ್ಷದ್ವೀಪ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದೆ.
- ಇತ್ತೀಚೆಗೆ ಅಂತರರಾಷ್ಟ್ರೀಯ ಶಿಕ್ಷಣ ಶೃಂಗಸಭೆಯನ್ನು ದುಬೈ ಯಲ್ಲಿ ನಡೆಸಲಾಯಿತು.
- ಕೇಂದ್ರ ಸರ್ಕಾರದ ಭಾರತ್ ನೆಟ್ (Bharat Net)Established:- 25 October 2011 ಯೋಜನೆಯು ಹಳ್ಳಿಗಳಲ್ಲಿ ಇಂಟರ್ನೆಟ್ ಸಂಪರ್ಕವನ್ನು ಒದಗಿಸುತ್ತದೆ.
- ಇತ್ತೀಚೆಗೆ ಭಾರತವು ಯುಎಇ ನೌಕಾಪಡೆಯೊಂದಿಗೆ ನಡೆಸಿದ ದ್ವಿಪಕ್ಷೀಯ ವ್ಯಾಯಾಮದ ಹೆಸರು ಜಾಯೇದ್ ತಲ್ವಾರ್ (Zayed Talwar)

Officers Adda

- ವಿಶ್ವ ಜೈವಿಕ ಇಂಧನ ದಿನವನ್ನು ಆಗಸ್ಟ್ 10 ದಿನದಂದು ಆಚರಿಸಲಾಗುತ್ತದೆ.
- ಇತ್ತೀಚಿಗೆ ಭಾರತ ಸರಕಾರವು 2ಜಿ ಎಥೆನಾಲ್ ಉತ್ಪಾದನೆಯನ್ನು ಉತ್ತೇಜಿಸಲು "ಪ್ರಧಾನ್‌ಮಂತ್ರಿ ಜೀ-ವನ್" ಯೋಜನೆಯನ್ನು ಜಾರಿಗೆ ತಂದಿದೆ

Officers Adda

- ಇತ್ತೀಚಿಗೆ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (APEDA), ವಾಯುಮಾರ್ಗದ ಮೂಲಕ ಯುಸ್‌ಗೆ ತಾಜಾ ದಾಳಿಂಬೆಗಳ ಮೊದಲ ಪ್ರಾಯೋಗಿಕ ಸಾಗಣೆಯನ್ನು ಯಶಸ್ವಿಯಾಗಿ ರಫ್ತು ಮಾಡಿದೆ.

- ದಾಳಿಂಬೆ ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲಿ ಆರನೇ ಸ್ಥಾನದಲ್ಲಿದೆ

- ಮಹಾರಾಷ್ಟ್ರ, ಗುಜರಾತ್, ಕರ್ನಾಟಕ, ರಾಜಸ್ಥಾನ ಮತ್ತು ಆಂಧ್ರಪ್ರದೇಶಗಳು ಭಾರತದಲ್ಲಿ ದಾಳಿಂಬೆ ಉತ್ಪಾದಿಸುವ ರಾಜ್ಯಗಳು.

Officers Adda

OFFICERS ADDA

# CA --- CS

CURRENT AFFAIRS TO CORE SUBJECT

MCQ TOPICS..



# GOLDEN THOUGHT

**People become successful the minute they decide to.**

**- Harvey Mackay**

# ಹಿಂದಿನ ಪ್ರಚಲಿತ ವಿದ್ಯಮಾನಗಳ ಆಧಾರಿತ ಪ್ರಶ್ನೆಗಳು

Officers Adda

1) ಇತ್ತೀಚಿಗೆ ಮೊದಲ ಖೇಲೋ ಇಂಡಿಯಾ ಬುಡಕಟ್ಟು ಕ್ರೀಡಾ ಉತ್ಸವವನ್ನು ಈ ಕೆಳಗಿನ ಯಾವ ಸ್ಥಳದಲ್ಲಿ ಆಯೋಜಿಸಲಾಗಿದೆ ?

1) ಭುವನೇಶ್ವರ

2) ಅಹ್ಮದಾಬಾದ್

3) ಲಕ್ನೋ

4) ನವದೆಹಲಿ

Officers Adda

2) ಇತ್ತೀಚೆಗೆ ಭಾರತವು ಈ ಕೆಳಗಿನ ಯಾವ ದೇಶದಿಂದ“ Anti Tank Spike NLOS" ಕ್ಷಿಪಣಿಗಳನ್ನು ಸ್ವೀಕರಿಸಿದೆ ?

1) ಇಸ್ರೇಲ್

2) ಜಪಾನ್

3) ಅಮೆರಿಕ

4) ರಷ್ಯಾ

Officers Adda

3) ಪ್ರತಿ ವರ್ಷ ಈ ಕೆಳಗಿನ ಯಾವ ದಿನಾಂಕದಂದು ಭಾರತದಾತ್ಯಂತ ರಾಷ್ಟ್ರೀಯ ಕೈಮಗ್ಗ ದಿನವನ್ನು ಆಚರಿಸಲಾಗುತ್ತದೆ ?

1) ಅಗಸ್ಟ್ 6

2) ಅಗಸ್ಟ್ 9

3) ಅಗಸ್ಟ್ 7

4) ಅಗಸ್ಟ್ 8

Officers Adda

4) ಆಗಸ್ಟ್ 2023 ರ ವೇಳೆಗೆ ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ ಯಾವುದು?

1) ಭಾರತ

2) ಚೀನಾ

3) ಅಮೆರಿಕ

4) ಬ್ರೆಜಿಲ್

Officers Adda

Officers Adda

# ಪ್ರಚಲಿತ ವಿದ್ಯಮಾನಗಳ ಆಧಾರಿತ ಪ್ರಶ್ನೆಗಳು

Officers Adda

**1) ವಿಶ್ವ ಜೈವಿಕ ಇಂಧನ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ ?**

1) ಆಗಸ್ಟ್ 10

2) ಆಗಸ್ಟ್ 08

3) ಆಗಸ್ಟ್ 09

4) ಆಗಸ್ಟ್ 11

Officers Adda

2) ಇತ್ತೀಚಿಗೆ ಈ ಕೆಳಗಿನ ಯಾವ ದೇಶದಲ್ಲಿ ನಡೆದ ಅನೆಸಿ ಇಂಟರ್ನ್ಯಾಷನಲ್ ಅನಿಮೇಷನ್ ಫೆಸ್ಟಿವಲ್ (AIFF) ನಲ್ಲಿ ಭಾರತವು ಮೊದಲ ಬಾರಿಗೆ ಭಾಗವಹಿಸಿದೆ?

1) ಫ್ರಾನ್ಸ್

2) ಜಪಾನ್

3) ಅಮೆರಿಕ

4) ರಷ್ಯಾ

Officers Adda

3) ಇತ್ತೀಚೆಗೆ ಸುದ್ದಿಯಲ್ಲಿದ್ದ "Nutri Garden Project" ಈ ಕೆಳಗಿನ ಯಾವ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದೆ ?

1) ಲಕ್ಷದ್ವೀಪ

2) ದೆಹಲಿ

3) ಅಂಡಮಾನ್ ಮತ್ತು ನಿಕೋಬಾರ್

4) ಪುದುಚೇರಿ

Officers Adda

Officers Adda

4) ಇತ್ತೀಚಿಗೆ ಪ್ರಾರಂಭಿಸಿದ ಸೂಕ್ಷ್ಮಜೀವಿಯ ವೈವಿಧ್ಯಮಯ ಸಂಸ್ಕೃತಿಯ ಸಂಗ್ರಹ ಕೇಂದ್ರ ಈ ಕೆಳಗಿನ ಯಾವ ಸ್ಥಳದಲ್ಲಿದೆ ?

1) ಚಂಡೀಗಢ

2) ಆಂಧ್ರ ಪ್ರದೇಶ್

3) ಮಧ್ಯ ಪ್ರದೇಶ್

4) ಗುಜರಾತ್

Officers Adda

Officers Adda

OFFICERS ADDA

# PDO

# CRASH COURSE

ONLINE CLASSES

60 ದಿನಗಳ ಕ್ರ್ಯಾಶ್ ಕೋರ್ಸ್

LIVE AND RECORDED CLASSES

PAPER 2
ಸಂಪೂರ್ಣ ಪಠ್ಯಕ್ರಮ ಮುಗಿಸಿಕೊಡಲಾಗುತ್ತದೆ

PAPER 1 & PAPER 2
MCQ TESTS WITH EXPLANATION

LAST DATE TO JOIN
AUGUST 14, 2023

CONTACT

8217546761/8217583629

# LAST DATE TO JOIN
# AUG 14,2023

OFFICERS ADDA

# SANKALPA 6.0

## KAS & IAS MAINS BATCH

KANNADA MEDIUM

LAST DATE TO JOIN : AUGUST 21,2023

CONTACT: 8217546761/8217583629



# LAST DATE TO JOIN

# AUG 21, 2023

Officers Adda



# LOWEST FEES IN KARNATAKA

WITH HEIGHEST QUALITY

# Contact no

Officers Adda

# 8217546761
# 8217583629

Officers Adda

Officers Adda
61.1K subscribers

Kannada Medium Current Affairs for all competitive exams (PC to DC) by BHARAT sir
For more updates subscribe to
OFFICERS ADDA telegram and You tube channel

Officers Adda Telegram channel :

https://t.me/officersadda

Course Details :

https://drive.google.com/file/d/1GuP8...

app link :

https://play.google.com/store/apps/de...

follow us on insta :

https://www.instagram.com/officersadd...

Telegram channel for essay and answers writing :

https://t.me/Art_Of_Answer_Writing1

June Current Affairs :

https://drive.google.com/file/d/1JROE...

oct current affairs :

https://drive.google.com/file/d/1KePH...

december current affairs:




IndianMoney's Finan...
Ad 4.2 ★ FREE
INSTALL

#Daily#Kannadamedium
#Top10MCQ #BharatSir #short

2.3K views · Streamed 23 hours ago

226 3 Live chat Share Dowi

Officers Adda
61.1K subscribers
SUBSCRIBED

Officers Adda

# ಗ್ರಾಮೀಣ ಪ್ರದೇಶದ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ

# OFFICERS ADDA ದ ಉಚಿತ ಸೇವೆಗಳು

- ಪ್ರತಿದಿನದ ಪ್ರಚಲಿತ ವಿದ್ಯಮಾನಗಳು
- (YouTube ನಲ್ಲಿ)
- ಪ್ರಚಲಿತ ವಿದ್ಯಮಾನಗಳ ಪಿಡಿಎಫ್
- ಮಾಸಿಕ ಪ್ರಚಲಿತ ವಿದ್ಯಮಾನಗಳು ಕೈಪಿಡಿ (officers adda telegram)
- ಒಂದು ವರ್ಷದ ಪ್ರಚಲಿತ ವಿದ್ಯಮಾನಗಳ ಕೈಪಿಡಿ (officers adda telegram)
- Art of Answer writing ಇಲ್ಲಿ ಪ್ರತಿದಿನ ಪ್ರಬಂಧಗಳು, ಕೆಎಎಸ್ ಮುಖ್ಯ ಪರೀಕ್ಷೆಯ ಪ್ರಶ್ನೆಗಳು ಮತ್ತು ಪಿಎಸ್ಐ ಸಂಬಂಧಿತ ಭಾಷಾಂತರ ಕೊಡಲಾಗುತ್ತದೆ.
- ವಿದ್ಯಾರ್ಥಿಗಳೊಂದಿಗೆ ಗೂಗಲ್ ಮೀಟ್ ಮುಖಾಂತರ ಸಲಹೆ ಮತ್ತು ಸೂಚನೆ. (8217546761)
- Daily Practice MCQ's in Telegram and YouTube
- Strategy classes for all type competitive exams
- ಸಂಪನ್ಮೂಲ ವ್ಯಕ್ತಿಗಳ ಜೊತೆಗೆ ಯೂಟ್ಯೂಬ್ ನಲ್ಲಿ ಚರ್ಚೆ
- ಸಾಧಕರ ಜೊತೆ ಸಂದರ್ಶನಗಳು.
- ಇನ್ನು ಹಲವಾರು

# THANK YOU

Officers Adda

-BY BHARAT C N